ಖಂಡ ೧ ಇತ್ಯಾದಿ.—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

"ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಸಚಿವರು).—"೧೯೮೭ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ಸ್ (ಎರಡನೇ ತಿದ್ದುಪಡಿ) ವಿಧೇಯಕ" ವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

"೧೯೮೭ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ಸ್ (ಎರಡನೇ ತಿದ್ದುಪಡಿ) ವಿಧೇಯಕ"ವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

೧೯೮೭ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಬುಗಳು, ವಂತ್ತು ಉದ್ಯೋಗಗಳ (ತಿದ್ದುಪಡಿ) ವಿಧೇಯಕ (ಪರ್ಯಾಲೋಚನಾ ಪ್ರಸ್ತಾವ)

ಶ್ರೀ. ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ತಾವುಗಳು, ೧೯೮೭ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಬುಗಳು ಮತ್ತು ಉದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ಕರೆಕ್ಟೆಡ್ ಕಾಪಿ ಕೊಟ್ಟ ಮೇಲೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೀರಿ. ಈಗ ತೆಗೆದುಕೊಳ್ಳಬಹುದು, ಎಲ್ಲರಿಗೂ ಪ್ರತಿಯನ್ನು ಕೊಟ್ಟಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಎಲ್ಲರಿಗೂ ತಿದ್ದಿದ ಪ್ರತಿಯನ್ನು ಕೊಟ್ಟಿದ್ದೀರಾ ?

ಶ್ರೀ. ಎ. ಲಕ್ಷ್ಮೀಸಾಗರ್.—ಹೌದು, ಎಲ್ಲರಿಗೂ ಕೊಟ್ಟಿದ್ದೇವೆ.

ಅಧ್ಯಕ್ಷರು.—ಎಲ್ಲರಿಗೂ ಕೊಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಒಪ್ಪಿಗೆ ಇದ್ದರೆ ನಮ್ಮ ಆಭ್ಯಂತರವಿಲ್ಲ. ಈ ಮನೆಯ ಎಲ್ಲಾ ಸದಸ್ಯರಿಗೂ ಅದಂ ತಲುಪಬೇಕು ಎಂದು ನಾನು ಕೇಳಿಕೊಳ್ಳುವುದು.

ಅಧ್ಯಕ್ಷರು.—ಎಲ್ಲರಿಗೂ ಕೊಟ್ಟಿದ್ದಾರೆ. ತಮಗೆ ಅದಕ್ಕಾಗಿ ಸಮಯ ಕೊಟ್ಟಿದ್ದಾರೆ ತಾವುಗಳು ಅದರ ಮೇಲೆ ಮಾತನಾಡಬಹುದು. ಮಾನ್ಯ ಮಂತ್ರಿಯವರು ವಿಧೇಯಕವನ್ನು ಮಂಡಿಸಬೇಕಂ.

ಶ್ರೀ ಎಂ. ಎಸ್. ಕೃಷ್ಣನ್.—ಈ ವೃತ್ತಿ ತೆರಿಗೆಯನ್ನು ಹೆಚ್ಚು ಮಾಡುವಂಥ ಹವ್ಯಾಸ ಜನತಾ ಪಕ್ಷದ ಸರ್ಕಾರ ಬಂದ ಮೇಲೆ ಹೆಚ್ಚು ಹೆಚ್ಚು ಆಗಿದೆ. ವೃತ್ತಿ ತೆರಿಗೆ ಬಗ್ಗೆ ನನಗೆ ತಿಳಿದ ಮಟ್ಟಿಗೆ ಆನೇಕ ವರ್ಷಗಳಿಂದ ಈ ಬಗ್ಗೆ ಚರ್ಚೆ ನಡೆಯುತ್ತಾ ಇದೆ. ಚರ್ಚೆ ನಡೆದು,ನಡೆದು ಅದು ಚರ್ವಿತಚರ್ವಣ ವಾಗಿದೆ. ಇದನ್ನು ೧೯೭೬ರಲ್ಲಿ ಮೊದಲಬಾರಿಗೆ ತೆಗೆದುಕೊಂಡು ಬಂದಾಗ, ಈ ಬಗ್ಗೆ ಇರುವ ಡಿಬೇಟ್ ನೋಡಿದರೆ ಗೊತ್ತಾಗುತ್ತದೆ ಮಾನ್ಯ ಎಂ.ವೈ. ಘೋರ್ಪಡೆಯವರು ಮಂತ್ರಿಯಾಗಿದ್ದಾಗ ಆಗ ಚರ್ಚೆ ನಡೆಯಿತು, ಆಗ ಅವರು ವೃತ್ತಿ ತೆರಿಗೆ ಹೊಸದೇನೂ ಅಲ್ಲ ಎಂದು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—೧೯೮೩ನೇ ಇಸವಿಯಲ್ಲಿ ಹೇಳಿದ್ದನ್ನು ಈಗ ಹೇಳುತ್ತಿದ್ದಾರೆ. ಅದೆಲ್ಲಾ ಈಗ ಏಕೆ ಸುಮ್ಮನೆ ?

ಶ್ರೀ ಎಂ. ಎಸ್. ಕೃಷ್ಣನ್.—ಸುಮ್ಮನೆ ಎಂದು ಹೇಳುವುದಕ್ಕೆ ನಾವು ಇಲ್ಲಿ ಕಾಲಹರಣ ಮಾಡುವುದಕ್ಕೆ ಬಂದಿಲ್ಲ.

ಶ್ರೀ. ಎ. ಲಕ್ಷ್ಮೀಸಾಗರ್.—ಯಾವುದೋ ವರ್ಷದಲ್ಲಿ ಹೇಳಿದ್ದನ್ನು ಈಗ ಹೇಳಿದರೆ ಹೇಗೆ ಎಂದು ಕೇಳಿದ್ದೇನೆ.

ಅಧ್ಯಕ್ಷರು.—ಅವರು ಓದಿಕೊಂಡು ಬಂದಿದ್ದಾರೆ. ಮಾತನಾಡಲಿ.....

ಶ್ರೀ ಎಂ. ಎಸ್. ಕೃಷ್ಣನ್.—ನಾನು ತಮ್ಮನ್ನು ಕೇಳಿಕೊಳ್ಳುವುದು, ಈ ಬಗ್ಗೆ ನನಗೆ ತಮ್ಮಿಂದ ರಕ್ಷಣೆ ಬೇಕು. ಇದರ ಬಗ್ಗೆ ಈ ಹಿಂದೆಯೂ ಅನೇಕಬಾರಿ ಮಾತನಾಡಿರುವುದು ಉಂಟು. ಈ ಮನೆಯಲ್ಲಿ ಈಗ ಅನೇಕ ಜನರು ಹೊಸ ಸದಸ್ಯರು ಇದ್ದಾರೆ. ಅವರ ಗಣನೆಗೆ ಇದನ್ನು ತರಬೇಕೆಂಬ ಉದ್ದೇಶ ನನ್ನದು. ಅವರೂ ಈ ವಿಷಯವನ್ನು ತಿಳಿದುಕೊಳ್ಳಲಿ. ಮೇ ೧೯೭೬ರಲ್ಲಿ ಮಾನ್ಯ ಮಂತ್ರಿಗಳು ಮೊದಲನೇ ಸಾರಿ ಇದನ್ನು ತಂದಾಗ, ಚರ್ಚೆ ನಡೆದು, ಘೋರ್ಪಡೆಯವರು ಮಾತನಾಡಿದರು. ಅವರ ಮಾದ ಒಂದು ಇತ್ತು. ಅದನ್ನು ಇವರು ಒಪ್ಪಿಕೊಳ್ಳುವುದಿಲ್ಲ ಎಂದು ಕೂಡ ನನಗೆ ಗೊತ್ತು. ಆಗ ಅವರು ಏನು ಹೇಳಿದರು ಎಂದರೆ, ವೃತ್ತಿ ತೆರಿಗೆಯನ್ನು ಜಾಸ್ತಿ ಮಾಡಿದರೆ, ಅದು ಜನಗಳ ಮೇಲೆ ಬೀಳುತ್ತದೆ, ನಗರ ಪ್ರದೇಶಗಳಲ್ಲಿರುವವರು ಅದನ್ನು ಕೊಡುತ್ತಾರೆ. ಕಾರಣ ಜನತಾ ಗೃಹ ನಿರ್ಮಾಣಕ್ಕೋಸ್ಕರವಾಗಿ ಆ ಹಣವನ್ನು ವಸೂಲು ಮಾಡುತ್ತೇವೆ ಎಂದು, ಆಗ ಕಾಂಗ್ರೆಸ್ ಪಕ್ಷದವರು ಆಳುತ್ತಿದ್ದರು. ಆಮೇಲೆ ಜನತಾ ಗೃಹನಿರ್ಮಾಣಕ್ಕೆ ಉಪಯೋಗಿಸುತ್ತೇವೆ ಆ ಹಣವನ್ನು ಎಂದರು. ಆಗ ನಾವು ಈ ತೆರಿಗೆ ಮಧ್ಯಮ ವರ್ಗದವರ ಮೇಲೆ ಡಾಕ್ಟರ್‌ಗಳ ಮೇಲೆ ಲಾಯರ್‌ಗಳ ಮೇಲೆ ಬೀಳುತ್ತದೆ, ಇದು ಸರಿಯಲ್ಲ, ಅಲ್ಲದೆ ಈಗಾಗಲೇ ಇನ್‌ಕಂ ಟ್ಯಾಕ್ಸ್ ಅನ್ನು ವಸೂಲು ಮಾಡುತ್ತಿದ್ದಾರೆ. ಅದನ್ನು ಮಾಡಿದ ಮೇಲೆ ಇದನ್ನು ಮಾಡುವುದು ಸರಿಯಲ್ಲ ಎಂದು ಹೇಳಿದೆವು. ಆಗ ಇವರು ಇಲ್ಲ, ಕಾರ್ಪೊರೇಷನ್‌ಗಳು ಮುನಿಸಿಪಾಲಿಟಿಗಳಿಲ್ಲ ವಸೂಲು ಮಾಡುತ್ತಿವೆ ಎಂದರು. ಆದರೆ ಆ ಸಂಸ್ಥೆಗಳು ಅದನ್ನು ವಿಲ್ಲಿಸಬೇಕೆಂದು ಪರಿಶೀಲನಾ ಸಮಿತಿಗಳು ತೀರ್ಮಾನ ಕೊಟ್ಟ ಮೇಲೆ ಅವು ಕಲೆಕ್ಟ್ ಮಾಡುತ್ತಿದ್ದುದನ್ನು ನಿಲ್ಲಿಸಿದರು. ಅಧ್ಯಕ್ಷರೇ, ಅನೇಕ ರಾಜ್ಯಗಳು ಇವನ್ನು ತರಲಿಲ್ಲ, ಆದರೆ ಇಲ್ಲಿ ಮಾತ್ರ ಜಾರಿಗೆ ತಂದರು. ಜನತಾ ಗೃಹನಿರ್ಮಾಣಕ್ಕೆ ಈ ಹಣ ಬಳಸುತ್ತೇವೆ ಎಂದಿದ್ದರಿಂದ ಆಯಿತು ಎಂದು ನಾವೂ ಅಂದೆವು. ಆ ಬಾಬ್ತಿನಲ್ಲಿ ೪.೫ ಕೋಟಿ ಕೂಡ ಬರಲಿಲ್ಲ. ಇದು ೭೬ರಲ್ಲಿ ನಡೆದದ್ದು. ಸರಿ ಅನಂತರ ಇವರು ಬಂದರು. ೧೯೮೩ರಲ್ಲಿ ಇವರು ಕರ್ನಾಟಕ ಕ್ರಾಂತಿರಂಗದೊಡನೆ ಸೇರಿಸಿ ಹೊರಡಿಸಿದ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದಾರೆಂದರೆ ಪೇಜ್ ೧೦ರಲ್ಲಿ "ವೃತ್ತಿ ತೆರಿಗೆ ರದ್ದತಿ" ಆದರ ಕೆಳಗೆ ನೆರೆಹೊರೆಯ ರಾಜ್ಯಗಳಿಗೆ ಸಮನಾದ ಮಾರಾಟ ತೆರಿಗೆ ಹಾಗೂ ನಿಯಂತ್ರಿತ ಮಾರುಕಟ್ಟೆ ತೆರಿಗೆಗಳು ಎಂದು. ಆದರೆ ಇವತ್ತಿನವರೆಗೂ, ನೆರೆಹೊರೆಯ ರಾಜ್ಯಗಳಲ್ಲಿರುವ ವಂಥ ವಿಧಾನಕ್ಕೆ ಇವರನ್ನು ಬದಲಾವಣೆ ಏನೂ ಮಾಡಲಿಲ್ಲ. ೧೯೮೫ರಲ್ಲಿ ಮಂತ್ರಿ ಜನತಾ ಪಕ್ಷ ಚುನಾವಣೆಗೆ ನಿಂತಾಗ ಇದು ಹಾಗೆಯೇ ಉಳಿದುಕೊಂಡಿತು. ಆ ಚುನಾವಣಾ ಪ್ರಣಾಳಿಕೆಯಲ್ಲೂ ಹಾಗೆಯೇ ಉಳಿಸಿಕೊಂಡರು. ಅದನ್ನು ಬದಲಾವಣೆ ಮಾಡಿದ್ದರೆ ಹೇಳಲಿ

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆ ನಿಮ್ಮ ಕೈಗೆ ಹೇಗೆ ಸಿಕ್ಕಿತು ? ನಿಮ್ಮ ಕೈಲಿ ಯಾವಾಗಲೂ ಇರುವುದು ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ ಮಾತ್ರ ಎಂದು ನಾನು ಅಂದುಕೊಂಡಿದ್ದೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಜಾತಕ ಎಲ್ಲಾ ನಾವೂ ಸ್ವಲ್ಪ ಹಿಡಿದುಕೊಂಡಿರುತ್ತೇವೆ ಸ್ವಾಮಿ ನೋಡಿ, ಈ ಪ್ರಣಾಳಿಕೆಯನ್ನು ಬಹಳ ಸುಂದರವಾಗಿ ಲಕ್ಷಣವಾಗಿ, ನಿಮ್ಮ ಪಕ್ಷವೇ ಅಚ್ಚುಹಾಕಿ ಪಂಚಿಬೆ. ಪ್ರಣಾಳಿಕೆಯಲ್ಲಿ ಈ ತೆರಿಗೆಯನ್ನು ಹೊರಸುತ್ತೇವೆ ಎಂದು ಹೇಳಿದ್ದರೆ ಅದು ಬೇರೆ ಸಮಾಚಾರ. ಆದರೆ ಅದರ ಬಗ್ಗೆ ಮಾತನಾಡಲೇ ಇಲ್ಲ ಆಗ ಏಕೆ ಮಾತನಾಡಲಿಲ್ಲ ಎಂದರೆ ಈಗಲೂ ಅದನ್ನು ಉಳಿಸಿಕೊಂಡಿರುವುದೇ ಕಾರಣ. ೧೯೮೫ನೇ ಇಸವಿಯಲ್ಲಿ ಈ ಮನೆಯಲ್ಲಿ ಚರ್ಚೆ ನಡೆದಾಗ

ಒಂದು ತಿದ್ದುಪಡಿಯನ್ನು ತಂದರು. ಆಗ ನಾವು ಮಾತನಾಡಿದಾಗಲೂ ನಮಗೆ ಜಾಸ್ತಿ ಹೊರಿಸ ಬೇಕೆನ್ನುವ ಅಭಿಪ್ರಾಯ ಇಲ್ಲ, ಸ್ವಲ್ಪ ಮಾತ್ರ ಹೊರಿಸುತ್ತೇವೆ' ಎಂದು ಹೇಳಿ ಜಾರಿಕೊಂಡರು. ಅಂದರೆ ಪ್ರಣಾಳಿಕೆಯಿಂದಲೇ ಜಾರಿಕೊಂಡರು. ಪ್ರಣಾಳಿಕೆ ಎಂದರೆ ಏನು ? ನಿಮ್ಮ ಭರವಸೆಗಳನ್ನು ಜನತೆಯ ಮುಂದಿಡುವುದು. ಅದಕ್ಕೇ ಅರ್ಥವಿಲ್ಲ ಎಂದರೆ ಇನ್ನೇನು ಮಾಡುವುದು ? ವೋಟ್ ತೆಗೆದುಕೊಂಡು ಬಂದ ಮೇಲೆ ಜನಗಳಿಗೆ ಹೇಳಿದ್ದನ್ನು ಇಂಪ್ಲಿಮೆಂಟ್ ಮಾಡಬೇಕಾಗುತ್ತದೆ. ಇಂಪ್ಲಿಮೆಂಟ್ ಮಾಡದಿದ್ದರೆ ಅಧಿಕಾರಕ್ಕೋಸ್ಕರ ಪ್ರಣಾಳಿಕೆ ಮಾಡಿಕೊಂಡಿದ್ದಾರೆ ಎಂದರೆ ಏನು ತಪ್ಪು ? ಜನಗಳಿಗೆ ಮೋಸ ಹೇಳಿ ಬರುವಂಥದಕ್ಕೆ ಚುನಾವಣೆ ಅಲ್ಲ ಎಂದು ಮಾತ್ರ ಹೇಳುತ್ತೇನೆ.

ಇನ್ನು ಈ ವಿಷಯಕ್ಕೆ ಬಂದರೆ, ಇವತ್ತು ಒಂದು ತಿದ್ದುಪಡಿ ತಂದಿದ್ದಾರೆ. ಈ ತಿದ್ದುಪಡಿ ಮುಖ್ಯವಾಗಿ ೧೨೦ ರೂ. ಬೇಸಿಕ್ ಇದ್ದು.....

> "Salary" or "Wage" means the basic salary or wage received by any person on regular basis whether in cash or kind but does not include any other allowance or remuneration, or any perquisites or profits."

ಇದರ ಬಗ್ಗೆ ಭಾರೀ ಚರ್ಚೆ ನಡೆಯಿತು. ಮೊದಲು ಇದ್ದ ಒರಿಜಿನಲ್ ಆ್ಯಕ್ಟ್‌ನಲ್ಲಿ ಎಲ್ಲಾ ರೆಮ್ಯುನರೇಷನ್. ಪ್ರತಿಯೊಂದನ್ನು ಸೇರಿಸಿದ್ದರು, ಚರ್ಚೆಯೆಲ್ಲಾ ಆದ ಮೇಲೆ ಕನ್‌ಸೇಷನ್ ಕೊಡುತ್ತಿದ್ದೇವೆಂದು ಮಾನ್ಯ ಹೆಗಡೆಯವರು ಹೇಳುತ್ತಾ ಬೇಸಿಕ್‌ವೇಜ್ ಆಧಾರದ ಮೇಲೆ ಮಾಡುತ್ತಿದ್ದೇವೆ ಇದಕ್ಕೆ ಎಲ್ಲವನ್ನೂ ಸೇರಿಸಿಕೊಂಡಿಲ್ಲ ಇದನ್ನು ಒಪ್ಪಿಕೊಳ್ಳಬೇಕೆಂದು ಹೇಳಿದರು. ಆವೊತ್ತು ಒಂದು ರಿಯಾಯಿತಿ ಕೊಟ್ಟ ಹಾಗೆ ಇತ್ತು. ಇವೊತ್ತು ಬೇಸಿಕ್‌ವೇಜ್ ಹೊರಟು ಹೋಯಿತು ಈಗ ತಂದಿರುವ ಅವರ ತಿದ್ದುಪಡಿ ಮಸೂದೆಯಲ್ಲಿ

> "Salary" or "Wage" includes pay or wages, dearness allowance and all other remunerations received by any person on regular basis, whether payable in cash or kind, and also includes perquisites, and profits in lieu of salary as defined in Section 17 of the Income-tax Act, 1961."

ಎಂದು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ the very definition itself is not any correct, The definition is in vague.

(ಶ್ರೀಮತಿ ಪುಷ್ಪಾವತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಒಂದು ಪೇಜ್ ಡೆಫನೇಷನ್ ಇವತ್ತಿನ ದಿವಸ ಕಾನೂನಿನ ಚೌಕಟ್ಟಿನೊಳಗೆ ಬರುವುದಕ್ಕೆ ವಿರೋಧವಾಗಿದೆ ಎಂದು ಹೇಳಬೇಕಾಗುತ್ತದೆ. ಈ ತರಹದ ಡೆಫಿನೆಷನ್ಸ್ ಅನ್ನು ಮಾಡಿದಾಗ ಒಂದು ಸ್ಪಷ್ಟತೆ ಇರಬೇಕು, ಸ್ಯಾಲರೀ, ವೇಜ್ ಎಂದರೆ ಏನು ಎಂಬುದನ್ನು ಇನ್‌ಕಂ ಟ್ಯಾಕ್ಸ್ ಆ್ಯಕ್ಟ್‌ನಲ್ಲಿ ಕೋಟ್ ಮಾಡಿದ್ದಾರೆ. ಅದರಲ್ಲಿ ಇದರ ಬಗ್ಗೆ ಬಹಳ ಸ್ಪಷ್ಟವಾದಂತಹ ಡಿಫನೇಷನ್ ಇದೆ. ಅದರಲ್ಲಿ ಏನು ಇದೆ ಎಂಬುದನ್ನು ಇಲ್ಲಿ ಹೇಳಲು ಇಷ್ಟಪಡುತ್ತೇನೆ ಅದೇನೆಂದರೆ Section 2 (24) of the Income-Tax Act, 1961 observes thus :

(24) "income" includes–

(i) profits and gains;

(ii) dividend;

(iia) voluntary contributions received by a trust created wholly or partly for charitable or religious purposes or by an institution established wholly or partly for such purposes, not being contributions made with a specific direction that they shall form part of the orpus of the trust or institution

(iv) the value of any benefit or perquisite, whether convertible into money or not, obtained from a company either by a director or by a person who has a substantial interest in the company, or by a relative of the director or such person, and any sum paid by any such company in respect of any obligation which, but for such payment, would have been payable by the director or other person aforesaid,"

(iv) (a) the value of any benefit or perquisite, whether convertible into money or not, obtained by any representative assessee mentioned in clause (iii) or clause (iv) of sub-section (1) of section 160 or by any person on whose behalf or for whose benefit any income is receivable by the representative assessee and any sum paid by the representative assessee in respect of any obligation which, but for such payment, would have been payable by the beneficiary." ಎಂದು ಇದೆ ಶ್ರೀ-ಟಿ-ಪಿ-ಆರ್-ಗಿರಲ್ಲಿ ಹೀಗೇ ಸೇರಿಸಿಕೊಂಡು ಹೋಗಿದ್ದಾರೆ ನಾನಂ ಅದನ್ನೆಲ್ಲಾ ನಾನು ಓದುವುದಿಲ್ಲ. ಇದನ್ನು ತಮ್ಮ ಗಮನಕ್ಕೆ ಏಕೆ ತರುತ್ತಿದ್ದೇನೆಂದರೆ ಇವತ್ತಿನ ದಿವಸ ನೀವು ಏನು ಮಾಡಿದ್ದೀರಿ. "and all other remunerations received or receivable by any person, whether payable in cash or in kind" ಎಂದು. ಇದು ಮೂಲಭೂತ ತತ್ವ ಏನಿದೆ, ಡೆಪೆನೇಷನ್ ಏನಿದೆ ಅದಕ್ಕೆ ವಿರುದ್ಧವಾಗಿದೆ. It should not be casual income ಆಕ್ಟ್‌ಯಲ್ಲಿ ಬರುವ ಇನ್‌ಕಂ ಅನ್ನು ಸೇರಿಸುವ ಹಾಗೆ ಇಲ್ಲವೆಂದು ಹೇಳುತ್ತಾರೆ. They call it as adventuous income." ಆ ತರಹದ ಇನ್‌ಕಂ ಅನ್ನು ನಾವು ಸೇರಿಸುವ ಹಾಗೆ ಇಲ್ಲ. ಸ್ಪೆಸಿಫಿಕ್ ಆಗಿ ಇಡಬೇಕೆಂಬ ದೃಷ್ಟಿಯಿಂದ ಹಿಂದೆ ಒರಿಜನಲ್ ಆಕ್ಟ್‌ನಲ್ಲಿ ಬೇರೆ ತರಹ ಇತ್ತು. ಒರಿಜಿನಲ್ ಆಕ್ಟ್‌ನಲ್ಲಿ ಇರುವುದೇ ಬೇರೆ ಈಗ ನೀವು ತಂದಿರುವುದೇ ಬೇರೆ. ಒರಿಜನಲ್ ಆಕ್ಟ್‌ನಲ್ಲಿ ಇರುವುದು.

> "Salary" or "Wage" means the basic salary or wage received by any person on regular basis, whether in cash or kind but does not include any other allowance or remuneration, or any perquisits or profits " ಎಂದು ಇದೆ.

ರೆಗ್ಯುಲರ್ ಬೇಸಿಸ್ ಎಂಬ ಪದವನ್ನು ಸೇರಿಸಿದ್ದಾರೆ. ಹಿಂದೆ ಮಾಡಿದಂಥ ೧೯೭೬ನೇ ಶಾಸನದ ಅರ್ಥ ಏನು ಇದೆ ಎಂದರೆ ಯಾರಿಗೆ ಪರ್ಮನೆಂಟ್ ಆಗಿ, ರೆಗ್ಯುಲರ್ ಆಗಿ, ಸಂಬಳ ಬರುತ್ತದೆಯೋ ಇದರ ಆಧಾರದ ಮೇಲೆ ಲೆಕ್ಕಾಚಾರ ಮಾಡಬೇಕೇ ವಿನಹ ರೆಗ್ಯುಲರ್ ಆಗಿ ಬರದೇ ಹೋದರೆ ಬೇರೆ ಯಾವುದೇ ಆಲೌಯೆನ್ಸ್ ಬಂದರೆ, ಬೋನಸ್ ಬಂದರೆ, ಕ್ಯಾಜುಯಲ್ ಆಗಿ ಪೇಮೆಂಟ್ ಬಂದರೆ ಆ ತರಹದ್ದು ಸೇರಿಸಿಕೊಳ್ಳಕೂಡದು ಎಂಬ ಅಭಿಪ್ರಾಯವನ್ನು ಇಟ್ಟುಕೊಂಡು ಆ ಶಾಸನವನ್ನು ಮಾಡಿದ್ದಾರೆ. ರೆಗ್ಯುಲರ್ ಬೇಸಿಸ್ ಎಂದರೆ ಬೇಸಿಕ್ ಪೇ, ಡಿಎ, ಹೆಚ್‌ಆರ್‌ಎ, ಸಿಸಿಎ ಈ ತರಹದ್ದು ಮಾತ್ರ ಲೆಕ್ಕಾಚಾರಕ್ಕೆ ತೆಗೆದುಕೊಳ್ಳಬೇಕು. ದುರದೃಷ್ಟವಶಾತ್ ಇದಕ್ಕೆ ವಿರುದ್ಧವಾಗಿ ಸರ್ಕಾರವು ಒಂದು ಸೂಚನೆಯನ್ನು ತೆಗೆದುಕೊಂಡು ಬಂದಿದೆ. ಇದು ತೀರಾ ಪ್ರತಿಗಾಮಿಯಾದುದು ಎಂದು ನಾನು ಹೇಳಬೇಕಾಗಿದೆ. ಇವತ್ತಿನ ದಿವಸ ಏನು ಹೇಳಿದ್ದಾರೆ ಎಂದರೆ ೧೯೦೦ರಿಂದ ೨೫೦೦ರವರೆಗೂ ಬರುವ ಆದಾಯವನ್ನು ಇದರಲ್ಲಿ ಸೇರಿಸಿದ್ದಾರೆ. ಮತ್ತೆ ೨೦೦೦ಕ್ಕೆ ಈಗ ಆಮೆಂಡ್‌ಮೆಂಟ್ ತೆಗೆದುಕೊಂಡು ಬರುವವರಿದ್ದಾರೆ ಎಂದು ಗೊತ್ತಾಗಿದೆ. ಯಾವುದೇ ಒಬ್ಬ ಮಧ್ಯಮ ವರ್ಗದ ನೌಕರನಿಗೆ ೬೦೦ ರೂಪಾಯಿಗಳ ಸಂಬಳ ಬಂದರೆ ಅದು ಬೆಂಗಳೂರು ನಗರದಲ್ಲಿ ಆಗಿರಬಹುದು, ಹುಬ್ಬಳ್ಳಿಯಲ್ಲಿ ಆಗಿರಬಹುದು, ಹರಿಹರದಲ್ಲಿ ಆಗಿರಬಹುದು, ಮೈಸೂರಿನಲ್ಲಿ ಆಗಿರಬಹುದು, ಪ್ರೈವೇಟ್ ಸೆಕ್ಟಾರ್‌ನಲ್ಲಿರಬಹುದು, ಅಥವಾ ಪಬ್ಲಿಕ್ ಸೆಕ್ಟಾರ್‌ನಲ್ಲಿರಬಹುದು. ಅವರು ಕಾರ್ಮಿಕರು ಆಗಿರಲಿ,

ಡಾಕ್ಟರಾಗಿರಲಿ, ಲಾಯರು ಆಗಿರಲಿ ೬೦೦ ರೂಪಾಯಿ ಬೇಸಿಕ್ ಪೇಗೆ ಡಿಎ, ಹೆಚ್‌ಆರ್‌ಎ, ಸಿಸಿಎ ಎಲ್ಲವನ್ನೂ ಸೇರಿಸಬೇಕಾಗುತ್ತದೆ. ಬೇಸಿಕ್ ಪೇ ೧೨೦೦ ರೂಪಾಯಿ ತೆಗೆದುಕೊಂಡರೆ ಅಂದಾಜು ಒಂದು ಲಕ್ಷ ಐದು ಲಕ್ಷ ಜನರೋ ಟ್ಯಾಕ್ಸ್‌ನ ಪರಿಮಿತಿಯೊಳಗೆ ಬರುತ್ತಾರೆ. ಎರಡು ಸಾವಿರ ರೂಪಾಯಿಗಳನ್ನು ಸೇರಿಸಿದರೆ ಆಗೋಚರವಾದ ವರಮಾನವನ್ನು ಗಣನೆಗೆ ತೆಗೆದುಕೊಂಡರೆ ಹೆಚ್ಚು ಜನರು ಈ ಟ್ಯಾಕ್ಸ್‌ನ ಮಿತಿಯಲ್ಲಿ ಬರುತ್ತಾರೆ ಹೆಚ್ಚು ಜನರ ಮೇಲೆ ಅಂದರೆ ಕಾರ್ಮಿಕರುಗಳಿಗೆ ಮಧ್ಯಮ ವರ್ಗದವರುಗಳಿಗೆ, ಆಫೀಸಿಗೆ ಹೋಗುವ ನೌಕರರಿಗೆ, ಲಾಯರುಗಳಿಗೆ, ಡಾಕ್ಟರುಗಳಿಗೆ, ಈ ಒಂದು ತೆರಿಗೆಯ ಹೊರೆಯನ್ನು ಹೊರಿಸುವ ಪ್ರವೃತ್ತಿಯನ್ನು ಸರ್ಕಾರವು ತೋರಿಸುತ್ತಿದೆ. ಇದಕ್ಕಿಂತ ಆನ್‌ಜಸ್ಟ್ ಆಥವಾ ಅನ್ಯಾಯವಾದಂಥ ತೆರಿಗೆ ಬೇರೆ ಯಾವುದೂ ಇಲ್ಲ.

(ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ನೀವು ನಿಮ್ಮ ಆಶ್ವಾಸನೆಯನ್ನು ಈಡೇರಿಸುವುದರಲ್ಲಿ ವಿಫಲರಾಗಿರುವುದು ಮಾತ್ರವಲ್ಲದೇ ಈ ರೀತಿ ಆನ್‌ಜಸ್ಟ್ ಮತ್ತು ಅನ್ಯಾಯವಾದಂಥ ತೆರಿಗೆಯನ್ನು ಕೂಡ ಹಾಕುತ್ತಿದ್ದೀರಿ. ಇದರಿಂದ ನಿಮಗೆ ಎಷ್ಟು ಸಂಪಾದನೆಯಾಗುತ್ತದೆ ಎನ್ನುವುದನ್ನು ನೋಡಿದರೆ ಅದೂ ಕೂಡಾ ಏನೂ ಇಲ್ಲ. ನಿಮ್ಮ ಬಜೆಟ್‌ನಲ್ಲಿ ಇದರಿಂದ ಐದೂವರೆ ಕೋಟಿ ರೂಪಾಯಿಗಳು ಬರುತ್ತದೆಂದು ಹೇಳಿದ್ದೀರಿ. ಹಿಂದೆ ಇದೇ ರೀತಿ ೧೯೭೬-೭೬ನೇ ಇಸವಿಯಲ್ಲಿ ಫೈನಾನ್ಸ್ ಮಿನಿಸ್ಟರು ನಾಲ್ಕೂವರೆ ಕೋಟಿ ರೂಪಾಯಿಗಳು ಬರುತ್ತದೆಂದು ಹೇಳಿದ್ದರು. ಆದರೆ ಅದು ಬರಲಿಲ್ಲ ನೀವು ಐದೂವರೆ ಕೋಟಿ ರೂಪಾಯಿಗಳ ವರಮಾನ ಬರುತ್ತದೆ ಎಂದು ಹೇಳಿದ್ದೀರಿ. ಇದನ್ನು ನೋಡಿದರೆ ಅಷ್ಟು ಬರುವಂಥ ಪರಿಸ್ಥಿತಿ ಕಾಣುವುದಿಲ್ಲ ಇದಕ್ಕಿಂತ ಕಡಿಮೆಯಾಗುತ್ತದೆ.

Sir, I am referring from page 9 of the Annual Report of the Finance Department for the year 1986–87 :

> "The salary/wage earners drawing basic/wage less than Rs. 1200/ per month are exempted from payment of profession Tax from 1st April 1983. Besides, the date fixed for annual payment of Profeosion Tax has been changed from 30th September to 30th April each year/with effect from 1st April 1986.
>
> The number of employers registered and the number of self-employed persons enrolled at the end of March 31st 1986 with comparative figures for the provious years are also furnished : The number of registered employees as at the end of March 1984, 1985 and 1986 is 17,303, 17,764 and 17,853 respectively and the number of self-employed persons enrolled as at the end or March 1984, 1985 and 1986 is 1.98 214, 1,86852 and 1,87,786 respectively. ಅಂದರೆ ಎರಡು ಲಕ್ಷ ಜನರ ಮೇಲೆ ತೆರಿಗೆಯನ್ನು ವಾಕಲಿಕ್ಕೆ ಹೊರಟಿದ್ದೀರಿ. If we see the collections during 1985–86 the revenue collected under this Act was Rs. 6.92 crores. During 1986–87, an amount of Rs. 6.50 crores is anticipated and upto end of November, 1986 Rs. 5.63 crores have been collected."

ಇದರಿಂದ ಬರತಕ್ಕ ಆದಾಯ ೫.೬೩ ಕೋಟಿ ಆಗಿದೆಯೆಂದು ಹೇಳಿದ್ದಾರೆ. ನಿನ್ನೆ ದಿವಸ ಮಾನ್ಯ ವಿತ್ತ ಮಂತ್ರಿಯವರು ಈ ರೀತಿ ಮಾತನಾಡಿದ್ದು ಆಶ್ಚರ್ಯವಾಗಿದೆ. ಪ್ರಾವಿಷನಲಿ ನಿನ್ನೆಯ ದಿವಸ ೧೨ಕೋಟಿ ರೂಪಾಯಿ ಬರುತ್ತದೆಂದು ಹೇಳಿದ್ದರು. ಈ ರೀತಿ ಬರುವ ೧೨ ಕೋಟಿ ರೂಪಾಯಿಗಳನ್ನು ಹೇಗೆ

ಬಿಟ್ಟು ಬಿಡಬೇಕಾಗುತ್ತದೆ ? ಈ ಬಗ್ಗೆ ಇವತ್ತು ಪತ್ರಿಕೆಯಲ್ಲಿ ಬಂದಿದೆ. ಇವರು ಹೇಳುವುದು ನಂಬಿಕೆಯೋ ? ಫೈನಾನ್ಸ್ ಡಿಪಾರ್ಟ್‌ಮೆಂಟ್ ರಿಪೋರ್ಟ್‌ನ್ನು ಸರಿಯಾಗಿ ಲೆಕ್ಕಾಚಾರ ಮಾಡಿ ಕೊಟ್ಟಿದ್ದಾರೆಂದು ನನ್ನ ಅಭಿಪ್ರಾಯ, ಅವರು ೬.೫ ಕೋಟಿ ರೂಪಾಯಿ ವಸೂಲ್ಮಾಡತಕ್ಕಂಥದ್ದು ಹೇಳಿದ್ದಾರೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ಪ್ರಶ್ನೆ. ಎಸ್ಟಾಬ್ಲಿಷ್‌ಮೆಂಟ್ ಚಾರ್ಜ್‌ಸ್. ಇದನ್ನು ತಾವು ಹೇಳಬೇಕು ಇದರಲ್ಲಿ ವೆಜ್ಜ್‌ವೆಷ್ಟಾಗಿದೆಯೆಂದು ಹೇಳಿದರೆ ಲೆಕ್ಕಾಚಾರ ಗೊತ್ತಾಗುತ್ತದೆ. Please clarify as to the percentage of collections. Really it is not a tax which is worth –collecting. It is the middle class of the socicty like the factory workers, lawyers, Engineers, office–going employees etc., which will be affected and it is indeed those people who have voted Janata Party to power. The Government has to really re-think about these people. Collections ಜಾಸ್ತಿ ಬರುವುದಿಲ್ಲ. ಸುಮ್ಮನೆ ಹೊರಿಸಿರಂತ್ತೀರಿ. ಅದನ್ನು ಕಲೆಕ್ಟ್ ಮಾಡುವುದಕ್ಕಾಗುವುದಿಲ್ಲ. ಅದರ ಕಡೆಗೆ ನಷ್ಟಕ್ಕೆ ಒಳಗಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಪ್ರಯೋಜನವಿಲ್ಲದೆ ತೆರಿಗೆ ಹೊರಿಸುವಂಥದ್ದು ಏತಕ್ಕೆ ? ಇದನ್ನು ಯಾವ ಆಧಾರದ ಮೇಲೆ ಮಾಡಿಲ್ಲ, ಇವತ್ತಿನ ದಿವಸ ಎರಡು ಸಾವಿರ ಟಿಟ್ಟಿರ್ ಮಾಡಿದ್ದಾರೆ. ಅದಕ್ಕೆ ಏನಾದರೂ ಬೇಸಿಸ್ ಇರಬೇಕಾಗಿಲ್ಲ. ಯಾವ ಆಧಾರವು ಇಲ್ಲ. ಕಾರ್ಮಿಕರ ಬಗ್ಗೆಯಾಗಲೀ ಅಥವಾ ಮಧ್ಯಮ ವರ್ಗದವರಾಗಲೀ ಅವರ ವರಮಾನ ಜಾಸ್ತಿಯಾಗಿದೆ ಅವರಿಗೆ ಕೊಡುವುದಕ್ಕೆ ಶಕ್ತಿ ಇದೆ, ಎಂದಿದ್ದರೆ, ಅವರೇನಾದರೂ ಬಂದು ವೇಗ್ ಸರ್ವೆ ಮಾಡಿದ್ದಾರೆ. ಅದಕ್ಕನುಗುಣವಾಗಿ ಇದನ್ನು ಮಾಡುವುದಕ್ಕೆ ಯೋಚನೆ ಮಾಡಬೇಕಾಗಿತ್ತು. ನನಗೆ ತಿಳಿದು ಮಟ್ಟಿಗೆ ಅವರು ಆ ರೀತಿ ಸರ್ವೆ ಯೋಚನೆ ಮಾಡಿಲ್ಲ ನಾನು ಅನೇಕ ವರ್ಷಗಳಿಂದ ಹೇಳುತ್ತಿದ್ದೇನೆ. ಕೂಲಿ ಸಮಾಕ್ಷೆ ಮಾಡಿದರೆ ರಿಯಾಲ್ ವೇಜ್‌ಸ್ ಮತ್ತು ಅಕ್ಯೂಟಲ್ ವೇಜ್ ಎಷ್ಟು ಕಡಿಮೆಯಾಗತ್ತದೆಂದು ಗೊತ್ತಾಗುತ್ತದೆ. ವೇಗ್ ಸರ್ವೆಯನ್ನು ಈ ಸರ್ಕಾರದಲ್ಲಿ ಒಂದು ದಿವಸ ಸಹ ಮಾಡಿಲ್ಲ. ಯಾರು ಅಲ್ಲ ಈ ಸರ್ಕಾರ ಮಾಡಿಲ್ಲ. ಎಂದು ಹೇಳಬೇಕಾಗಿದೆ. ಇದು ಇರುವಂಥ ವಿಷಯ. ಈಗ ಇರುವ ವಾಸ್ತವ ಸಂಗತಿ. ಇವತ್ತು ಪತ್ರಿಕೆಯಲ್ಲಿ ಒಂದು ನ್ಯೂಸ್ ಐಟಂ ಬಂದಿದೆ.

> I am reading from Deccan Herald of to day.—
>
> "Real Eernings of workers decline–while indices of money earnings of workers have registered a continuous rising trend. The real earnings have shown a steady decline. It is estimated that against cent per cent increase in wages in overall terms over a ten year period, real wages have decreasedby about 30%."

So there is 30% decrease in the real wages and this extra amoune of tax you are going to impose. Where is the sanctity ? Whert is the justice ? That is what I am pointing out.

> "In the case of factory workers earnings less than Rs. 400 a month, statistics perpared by the Government show that with 1961 as the base(100), the index number of money earnings increased from 128 in 1965 to 207 in 1975 while real earnings dropped from 97 to 67 in the same period. For mine workers money earnings in the same period showed a rise from 127 to 454 whereas in real terms the increase was only from 96 to 146."

"The plunge downward in real wage term was since been apparently steeper considering the rise in consumer price index but detailed and up-to-raise statistics are not yet available."

"The Labour Bureau compiles index numbers of money earnings and real earnings of workers earning less than Rs. 400 a month..."

So earnings are coming down of not only the workers but also teh middle-class employees. Similarly the doctors, lawyers and engineers despite the fact the pay commission recommendations ಸಂಬಳ ಜಾಸ್ತಿ ಆಯಿತು. ಆದರೆ ಮೂಲಭೂತವಾಗಿ ನೋಡಿದರೆ ಅವರ ಸಂಬಳವೇನು ಜಾಸ್ತಿ ಆಗಲಿಲ್ಲ. ಹಾಗಿರಬೇಕಾದರೆ ನೀವು ಇವರ ಮೇಲೆ ತೆರಿಗೆಯನ್ನು ಹಾಕಬಾರದಾಗಿತ್ತು. It is hard but as poorer section of society ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಇದನ್ನು ಬಿಟ್ಟು ಬಿಡ ಬೇಕೆಂದು ಮಾನ್ಯ ಅಧ್ಯಕ್ಷರೆ, ಇನ್ನೊಂದು ಮಾತನ್ನು ಹೇಳುತ್ತೇನೆ. ಅದಕ್ಕೆ ಈಗಾಗಲೇ ನಾನು ಅಮೆಂಡ್‌ಮೆಂಟ್‌ನ್ನು ಕಳುಹಿಸಿದ್ದೇನೆ. ಅವೇಲೆ ನಾನು ಅದರ ಬಗ್ಗೆ ಮಾತನಾಡುತ್ತೇನೆ. ಆದರೆ ಒಂದೇ ಸಮನಾಗಿ ೧೯೭೬ ರಿಂದ ೮೬ರ ವರೆಗೆ ಇದೇ ರೀತಿ ಮಾತನಾಡುತ್ತ ಬಂದಿದ್ದೀವಿ. ಇದು ಸರಿಯಲ್ಲ, ಇದು ನ್ಯಾಯವಲ್ಲ ಎಂದು ಹೇಳುತ್ತಲೆ ಬಂದಿದ್ದೇವೆ. ಮತ್ತೆ ಹಿಂದ ಇದ್ದಂಥ ಸರ್ಕಾರ ಕೂಡ ಇದು ನ್ಯಾಯವಲ್ಲವೆಂದು ಹೇಳಿದೆ. ಆದರೂ ಸಹ ಅವರು ಇದನ್ನು ಇಂಟ್ರಡ್ಯೂಸ್ ಮಾಡಿದ್ದಾರೆ ಜನತಾ ಸರ್ಕಾರ ಬಂದ ಮೇಲೆ ಅದನ್ನು ಕಿತ್ತು ಹಾಕುತ್ತೇವೆಂದು ಹೇಳಿದರು. ಆದರೆ ಅದನ್ನು ಕಿತ್ತು ಹಾಕುವುದಕ್ಕೆ ಪ್ರಯತ್ನವನ್ನು ಮಾಡಲಿಲ್ಲ. ಮತ್ತೆ ಇನ್ನು ಜಾಸ್ತಿ ಮಾಡಿದ್ದಾರೆ. ಅಂದ ಮೇಲೆ ಈಗ ಜನ ಏನು ಹೇಳುತ್ತಾರೆ ಅದು ನಿಜ 'ಜನತಾ ಸರ್ಕಾರ ಹೇಳುವುದು ಒಂದು ಮಾಡುವುದು ಒಂದು' ಎಂದು ಈ ರೀತಿ ಇರುವಾಗ ಅವರು ಹೇಳುವುದು ತಪ್ಪಾಗುವುದಿಲ್ಲವೆಂದು ಅನ್ನಿಸುತ್ತದೆ. ನನ್ನ ಅಭಿಪ್ರಾಯದಲ್ಲಿ ಈ ತೆರಿಗೆಯನ್ನು ಹೊರಿಸುವುದು ಸರಿಯಲ್ಲ. ಅದನ್ನು ವಾಪಸ್ ತೆಗೆದುಕೊಳ್ಳಬಿದ್ದರೆ ಅದು ಸರಿಯಾಗುವುದಿಲ್ಲ, ನ್ಯಾಯವಾಗಿರುವುದಿಲ್ಲ. ಮತ್ತೆ ಇದು ಇಮಿಡಿಯೇಟ್ ಡಿಫೆಕ್ಟ್‌ವನ್ ಬೇರೆ ಇದೆ. ಇದನ್ನು ವಾಪಸ್ ತೆಗೆದುಕೊಳ್ಳಬಿದ್ದರ ತಮಗೆ ಯಾವುದೇ ರೀತಿಯಲ್ಲಿ ರಾಜಕೀಯವಾಗಿಯೂ ಅನುಕೂಲವಾಗುವುದಿಲ್ಲವೆಂದು ಹೇಳುತ್ತೇನೆ. ತಾವು ಹೇಳಿರುವು ದಕ್ಕೆ ಸಂಪೂರ್ಣವಾಗಿ ವಿರದ್ಧವಾಗಿ ಹೋಗುತ್ತಿದ್ದಿರೆಂದು ನಾನು ಹೇಳುತ್ತೇನೆ.

ಶ್ರೀ ಆರ್. ವೆಂಕಟರಾವಯ್ಯ (ಮುಳಬಾಗಿಲು). ಮಾನ್ಯ ಅಧ್ಯಕ್ಷರೇ, ೧೯೭೭ ರಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದಾಗ ಮಾನ್ಯ ಲಕ್ಷ್ಮೀಸಾಗರ್ ಅವರು ನಮ್ಮ ಲಾಯರ್‌ಗಳಿಗೆ ಒಂದು ಮಾತನ್ನು ಹೇಳಿದರು. ನೋಡಿ ಈಗ ಕಾಂಗ್ರೆಸ್ ಸರ್ಕಾರ ಬಂದಿದೆ. ಅದು ವೃತ್ತಿ ತೆರಿಗೆಯನ್ನು ಹಾಕುತ್ತದೆ. ನಾವು ಬಂದರೆ ಅದನ್ನು ತೆಗೆಯುತ್ತೇವೆ ಎಂದು ಜೊತೆಗೆ ಅವರ ಮ್ಯಾನಿಫೆಸ್ಟೋನಲ್ಲಿ ಅದನ್ನು ಇನ್‌ಕ್ಲೂಡ್ ಮಾಡಿದರು. ಬುದ್ದಿಜೀವಿಗಳಿಗೆ, ಪತ್ರಕರ್ತರಿಗೆ ಎಲ್ಲರಿಗೂ ಹೇಳಿದರು, ಈ ಕಾಂಗ್ರೆಸ್ ಸರ್ಕಾರ ಬಹಳ ದುಷ್ಟ ಸರ್ಕಾರ, ನಿಮ್ಮ ವೃತ್ತಿಗೂ ಕೂಡ ತೆರಿಗೆಯನ್ನು ಹಾಕತ್ತದೆ. ಅದನ್ನು ನಾವು ತೆಗೆಯುತ್ತೇವೆ ಎಂದು ಆದರೆ ಇವರು ಅದನ್ನು ತೆಗೆಯಲಿಲ್ಲ. ಮತ್ತೆ ಅದನ್ನೆ ಎಕ್ಸ್‌ಟೆಂಡ್ ಮಾಡುತ್ತಿದ್ದಾರೆ. ಮಾನ್ಯ ಕೃಷ್ಣನ್ ಅವರು ಹೇಳಿದ ಹಾಗೆ ಇದರಲ್ಲಿ ೫೫ ಕೋಟಿ ಬರುವುದಿಲ್ಲ. ನನಗೆ ಗೊತ್ತಿರುವ ಹಾಗೆ ಖಂಡಿತ ಇದರಲ್ಲಿ ಸುಮಾರು ೨೫ ಕೋಟಿ ಜಾಸ್ತಿ ಬರುತ್ತದೆ. ಅವರು ಬೇಕಾದರೆ ಇದನ್ನು ಇಂಟಾರ್ಸ್‌ಪೆಕ್ಟ್ ಮಾಡಲಿ ಅದಕ್ಕೆ ಅವರು ಒಪ್ಪುಕೊಂಡಿದ್ದಾರೋ ಇಲ್ಲವೊ. ನಮ್ಮ ಲಕ್ಷ್ಮೀಸಾಗರ್ ಅವರು ಜರ್ಮನಿಯಲ್ಲಿ ಒಳ್ಳೆಯ ಜೂ ಇದ್ದಹಾಗೆ. ಅವರಿಗೆ ಸರ್ಕಾರಕ್ಕೆ ಹಣ ಮಾಡಿಕೊಡುವುದು ಎಂದರೆ ಬಹಳ ಇಷ್ಟ. ಏಷ್ಟೇ ಕಷ್ಟವಾದರೂ ಸರ್ಕಾರಕ್ಕೆ ಸಂಪಾದನೆ ಮಾಡಿಕೊಡುವ ಆಸೆ ಇದೆ. ಆದರೆ ಅವರು ಕೊಟ್ಟಂತ ಮಾತನ್ನು ಉಳಿಸಿಕೊಳ್ಳುವ ಬಗ್ಗೆ ಯೋಜನೆ ಮಾಡುವುದಿಲ್ಲ. ಅವರು ಏನೋ ಕೆಲವಾರು ಆಶ್ವಾಸನೆಗಳನ್ನು ಕೊಟ್ಟಿದ್ದಾರೆ ಅನುಗಳಲ್ಲಿ ಕೆಲವನ್ನಾದರೂ ಮಾಡಬಹುದು. ನಾವು ಏನು ಹೇಳಿದರು ಅವರಿಗೆ ಅರ್ಥವಾಗುವುದಿಲ್ಲ. ಏಕೆಂದರೆ

ಇಲ್ಲಿ ೨ ಸಾವಿರಕ್ಕೂ ಮೇಲ್ಪಟ್ಟವರಿಗೆಲ್ಲ ಹಾಕಂತ್ತಿದ್ದಾರೆ? ಇದು ಲಕ್ಷ್ಮೀಸಾಗರ್ ಅವರಿಗೂ ಅಪ್ಲೈ ಆಗುತ್ತದೆ. ದುರಾದೃಷ್ಟವಶಾತ್ ಅವರು ಬ್ರಹ್ಮಚಾರಿಗಳು. ಅವರಿಗೆ ಮದುವೆಯಾಗಿ ೩-೪ ಜನ ಮಕ್ಕಳಿದ್ದಿದ್ದರೆ, ಆಗ ಅವರಿಗೆ ಕಷ್ಟ ಗೊತ್ತಾಗುತ್ತಾ ಇತ್ತು.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಅವರು ಕೊಟ್ಟಿರುವುದನ್ನು ಸರಿಯಾಗಿ ಓದಿಲ್ಲವೆಂದು ಕಾಣುತ್ತದೆ. ಇದು ಪ್ರೊಫೇಷನಲ್ ಪೀಪಲ್‌ಗೆ ಅಪ್ಲೈ ಆಗುವುದಿಲ್ಲ. ಲಾಯರ್ಸ್ ಡಾಕ್ಟರ್ಸ್, ಆಡಿಟರ್ಸ್ ಯಾರಿಗೂ ಇದು ಅಪ್ಲೈ ಆಗುವುದಿಲ್ಲ. ವೇಜ್ ಅರ್ನರ್ಸ್ ಮತ್ತು ಸ್ಯಾಲರೀಡ್ ಪೀಪಲ್‌ಗೆ ಮಾತ್ರ ಇದು ಅನ್ವಯಿಸುತ್ತದೆ. ಅದಕ್ಕೋಸ್ಕರ ಮುಂದೆ ತಮ್ಮ ಕಾಮೆಂಟ್ ಬೇಡವೆಂದು ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ, ಅವರು ನಮಗೆಲ್ಲಾ ಟ್ಯಾಕ್ಸ್ ಹಾಕಿದ್ದಾರು. ಅದನ್ನು ಅವರು ವಾಪಸ್ ತೆಗೆದುಕೊಳ್ಳಬೇಕಾಗಿತ್ತು. ತೆಗೆದುಕೊಳ್ಳಲಿಲ್ಲ. ಅದನ್ನು ಇಂಟ್ರಪ್ಟ್ ಮಾಡಿದ ವ್ಯವಸ್ಥೆಯಿಂದಲ್ಲ ಅದು ಬಹಳ ಬುದ್ಧಿವಂತಿಕೆಯಿಂದ ಮಾಡುವುದು. ಅವರಿಗೆ ಯಾರೋ ಬುದ್ಧಿವಂತರು ಹೇಳಿಕೊಟ್ಟಿರಬಹುದು. ಇಷ್ಟು ತೆರಿಗೆ ಹಾಕಿದರಲ್ಲಿ ೧೫ ಕೋಟಿ ಬರುತ್ತದೆ ಎಂದು. ಅದರಲ್ಲಿ ಎಷ್ಟೋ ಜನ ಸೇರುತ್ತಾರೆ.

> "Salary or wage includes pay or wages, dearness allowance and all other remunerations received or receivable by any person, whe ther payable in cash or in kind and also includes perquisites or profits in lieu of salary, as defined in section 17 of the Income Tax Act, 1961"

ನಮ್ಮ ಎಂ. ಎಲ್. ಎ ಗಳಿಗೆ ಇಷ್ಟು ವರ್ಷ ಈ ಟ್ಯಾಕ್ಸ್ ಬೀಳುತ್ತಿರಲಿಲ್ಲ. ಈಗ ಅವರಿಗೂ ಕೂಡ ವೃತ್ತಿ ತೆರಿಗೆಯನ್ನು ಹಾಕಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ ಸುಮಾರು ೮೦ ಪರ್ಸೆಂಟ್‌ನಷ್ಟು ಸರ್ಕಾರಿ ನೌಕರರು ಯಾರು ಇದನ್ನು ತಪ್ಪಿಸಿಕೊಳ್ಳುವ ಹಾಗಿಲ್ಲ. ಈ ಏನೋ perquisites ಎಂದು ಮಾಡಿ ಬಹಳ ಬುದ್ಧಿವಂತಿಕೆಯಿಂದ ಈ ತೆರಿಗೆಯನ್ನು ಹಾಕಿದ್ದಾರೆ. ಅದರಿಂದ ಈಗ ಸುಮಾರು ೧೫ ಕೋಟಿ ಬರುತ್ತದೆ. ಕೆಲವೊಮ್ಮೆ ಇನ್ನೂ ಜಾಸ್ತಿ ಬರುತ್ತದೆ. ಮಂತ್ರಿ ಎಲ್ಲಾ ವರ್ಷಗಳನ್ನು ಇದರಲ್ಲಿ ಸೇರಿಸಿಕೊಳ್ಳುವ ಪರಿಸ್ಥಿತಿ ಬಂದಿದೆ. ಶ್ರೀ ಲಕ್ಷ್ಮೀಸಾಗರ್ ಅವರಿಗೆ ಬರುವ ೨ ಸಾವಿರ ಸಾಕಾಗುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಏಕೆಂದರೆ ಈಗ ಅವರಿಗೆ ಒಂದು ಕಾಫಿ ಕುಡಿಬೇಕಾದರೂ ಎಷ್ಟು ಕಷ್ಟ ಎಂದು ಗೊತ್ತಾಗಿದೆ. ನನಗೆ ಈಗ ಬರುವ ಸಂಬಳ ಸಾಕಾಗುವುದಿಲ್ಲ ಎಂದು ಅವರೇ ಹೇಳುತ್ತಿದ್ದರು. ಅದೇ ಅವರಿಗೆ ಇನ್ನು ೪-೫ ಜನ ಮಕ್ಕಳಿದ್ದಿದ್ದರೆ ಕಷ್ಟ ಏನೆಂದು ಗೊತ್ತಾಗುತ್ತಾ ಇತ್ತು. ಅದೇ ಒಬ್ಬ ಸರ್ಕಾರಿ ಲೇಬರರ್ ಅಥವಾ ಒಬ್ಬ ಸಾಮಾನ್ಯ ಮ್ಯಾನ್, ಸರ್ಕಾರಿ ಕೆಲಸದಲ್ಲಿರುವವರು ಯಾರು ಇದರಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಎರಡು ಸಾವಿರ ಎಂದರೆ ಅದೇನು ಬಹಳ ದೊಡ್ಡ ಮೊತ್ತ ಎಂದು ತಿಳಿದುಕೊಂಡಿದ್ದಾರೆ. ಆದರೆ ಇಲ್ಲಿ ಸುಮಾರು ೩೦೦ ರಿಂದ ೪೦೦ ರೂಪಾಯಿಗಳವರೆಗೆ ಮನೆ ಬಾಡಿಗೆ, ೧೦೦ ರೂಪಾಯಿ ಎಲೆಕ್ಟ್ರಿಸಿಟಿ ಆಗುತ್ತದೆ. ಇದರ ಜೊತೆಗೆ ಅವರ ಮನೆಯಲ್ಲಿ ಸ್ಕೂಲ್ ಗೋಯಿಂಗ್ ಅಥವಾ ಕಾಲೇಜ್ ಗೋಯಿಂಗ್ ಚಿಲ್ಡ್ರನ್ ಇದ್ದರಂತೂ ಅವರು ಸತ್ತರು. ಇಂತಹವರ ಮೇಲೆ ಟ್ಯಾಕ್ಸ್ ಹಾಕುತ್ತಿದ್ದಾರೆ. ಇವರಿಗೆ ೨೪೦ ರೂಪಾಯಿ ಟ್ಯಾಕ್ಸ್ ಬೀಳುತ್ತದೆ. ತಾವು ಯಾವ ರೀತಿಯ ಆಶ್ವಾಸನೆಗಳನ್ನು ಕೊಟ್ಟಿದ್ದೀರೋ ಅದಕ್ಕೆ ತದ್ವಿರುದ್ಧವಾಗಿ ತಾವು ಮಾಡುತ್ತಿದ್ದೀರಿ. ಆದ್ದರಿಂದ ಇದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

SRI BLASIUS D'SOUZA (Mangalore).— Mr. Speaker, the Profession Tax was earlier collected by the Municipalities and Corporations In 1975 the Government felt that the collection was not done properly and the Government started to collect the profession tax on a condition that this will be paid back proportionately to the corporation or municipality. Till now in the last four years after the

Janata Government has come into power the proportionate professioned tax has not been paid to the Corporation or municipalities. I was shocked to read in today's newspaper, "CM rules out abolition of Profession Tax. Chief Minister Ramakrishna Hegde today ruled out abolition of the Profession Tax saying it yielded revenue of upto Rs. 12 crores a year that would be used for rural development." This is not a tax which has to be used for rural development. There are many taxes which are to be used for the rural development particularly. This taxation Bill has been moved by hon. Minister Lakshmisagar who is incharge of Urban Development and I am sure he will keep up his rights and he will see that this tax should go to the Corporation and Municipalites. I should say that this is a double taxation because after this tax collection was done by the Government the municipalities and corporations are taxing D & O tax under the Health Department. Every shop and every trade has been taxed and this is a second tax. I should say this a double tax and if this is challenged in the court, this profession tax will be quashed.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಇದರ ಮೇಲೆ ಪ್ರಬಲವಾಗಿ ದೀರ್ಘವಾಗಿ ಆಳವಾದಂಥ ತಿಳುವಳಿಕೆ ಮತ್ತು ಅಭ್ಯಾಸದ ಪರಿಶ್ರಮದಿಂದ ಸನ್ಮಾನ್ಯ ಕೃಷ್ಣನ್‌ರವರು ಮಾತನಾಡಿದ್ದಾರೆ. ಅವರು ಒಟ್ಟು ಮಾತಿನಲ್ಲಿ ಹೇಳುವುದು ಏನೆಂದರೆ ಈತೆರಿಗೆ ಹಾಕಬೇಡಿರಿ ಎಂದು ಈ ತೆರಿಗೆಯಿಂದ ವೇಜಸ್ ನಲ್ಲಿರುವವರಿಗೆ ತೊಂದರೆಯಾಗುತ್ತದೆ, ಸಂಬಳ ಬರುವವರಿಗೆ ತೊಂದರೆಯಾಗುತ್ತದೆ ಎನ್ನುವುದು ಅವರ ಮೊತ್ತದಲ್ಲಿರತಕ್ಕಂಥಾ ಸಾರಾಂಶ, ಅವರ ಉದ್ದವಾದ ಭಾಷಣದಲ್ಲಿರತಕ್ಕಂಥ ಸಾರಾಂಶ. ಇದು ಡಾಕ್ಟರ್‌ಗಾಲಿ ಲಾಯರ್‌ಗಾಗಲಿ ಅನ್ವಯಿಸುವುದಿಲ್ಲ. ಯಾರು ಸ್ವಂತ ಉದ್ಯೋಗದಲ್ಲಿದ್ದು ಕೊಂಡು ಜೀವನ ಮಾಡುತ್ತಾರೆ ಅವರಿಗೂ ಮಾತ್ರ ಅನ್ವಯಿಸುತ್ತದೆ. ಎಂದು ಅವರು ಹೇಳಿದರು. ಇದು ಡಾಕ್ಟರ್ಸ್‌ಗೂ ಲಾಯರ್ಸ್‌ಗೂ ಬರುತ್ತದೆ ಎಂದು ಹೇಳಿದರು. ಇದು ಅವರಿಗೆ ಬರುವುದಿಲ್ಲ. ಯಾರಿಗೆ ಸಂಬಳ ಬರುತ್ತದೆ, ಯಾರಿಗೆ ವೇಜಸ್ ಬರುತ್ತವೆ ಅವರಿಗೆ ಇನ್ನೂ ಇತರೇ ವರಮಾನಗಳು ಬಂದರೆ ಅವರಿಗೆ ಮಾತ್ರ ಈ ಪ್ರೊಫೆಷನಲ್ ಟ್ಯಾಕ್ಸ್ ಅನ್ವಯಿಸುತ್ತದೆ. ಇದರಿಂದ ಸರ್ಕಾರಕ್ಕೆ ಹೆಚ್ಚುಗಿ ೫–೫½ ಕೋಟಿ ಆದಾಯ ಬರುತ್ತದೆನ್ನುವ ನಿರೀಕ್ಷೆ ಇದೆ. ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದರಲ್ಲಿ ಒಂದು ರಿಯಾಯಿತಿಯನ್ನು ತೋರಿಸಿದ್ದಾರೆ. ೧೯೮೭–೮೮ರ ಬಜೆಟ್ ಭಾಷಣದ ೫೫ನೇ ಪ್ಯಾರಾದ ಎರಡನೇಯ ಭಾಗದಲ್ಲಿ ಈರೀತಿ ಕೊಟ್ಟಿದ್ದಾರೆ. Agriculturists growing plantation crops with a holding upto 15 acres will be exempt from Professional Tax ಎಂದು ಇದೆ. ಈ ಪ್ಯಾರಾವನ್ನು ಶ್ರೀ ಆರ್. ವೆಂಕಟರಾವಯ್ಯನವರು ನೋಡಿಲ್ಲ ಎಂದು ಕಾಣುತ್ತದೆ. ರೈತರಿಗೆ ಏನೂ ಸಹಾಯ ಮಾಡಲಿಲ್ಲ ಎಂದು ಹೇಳುತ್ತಾರೆ. ಅವರಿಗೆ ಸಾವು ಈ ರೀತಿಯಾಗಿ ಸಹಾಯವನ್ನು ತೋರಿಸಿದೆಂದು ಹೇಳುತ್ತೇನೆ. ಅವರು ಇದನ್ನು ಸರಿಯಾಗಿ ಗಮನಿಸಬೇಕು ಮೊದಲು ಗ್ಯಾಸ್ ಸ್ಯಾಲರಿ ಎಂದು ಇತ್ತು, ಅದನ್ನು ಈಗ ಸ್ಯಾಲರಿ ಎಂದು ಬದಲಾವಣೆ ಮಾಡಿದ್ದೇವೆ. ಏತಕ್ಕೇಂದರೆ ನಮ್ಮ ರಾಜ್ಯದಲ್ಲಿ ಈಗ ಇರತಕ್ಕಂಥ ಪ್ರೊಫೆಷನಲ್ ಟ್ಯಾಕ್ಸ್ ಗ್ಯಾಸ್ ಸ್ಯಾಲರಿ ೨೫೦೦ ಎಂದು ಇತ್ತು. ಅದರ ಮೇಲೆ ಅವರು ಈ ವೃತ್ತಿ ತೆರಿಗೆ ಕೊಡಬೇಕಾಗಿತ್ತು. ನಮ್ಮ ರಾಜ್ಯದಲ್ಲಿ ಕೆಲಸದಲ್ಲಿರತಕ್ಕಂಥವರು ಯಾರ್ಯಾರೂ ಎಂದರೆ ಅವರು ಎಲ್ ಐ.ಸಿ.ನಲ್ಲೇ ಇರಬಹುದು, ಬ್ಯಾಂಕ್‌ನಲ್ಲೇ ಇರಬಹುದು, ಅಥವಾ ಕೈಗಾರಿಕಾ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥಾವರೇ ಇರಬಹುದು. ಯಾರಿಗೆ ಬೇಸಿಕ್ ಸ್ಯಾಲರಿ ೨೫೦೦ ಗಿಂತ ಕಡಿಮೆ ಇದ್ದರೆ ಅವರು ಈ ವೃತ್ತಿ ತೆರಿಗೆಯನ್ನು ಕೊಡಬೇಕಾಗಿಲ್ಲ. ಆದರೆ ಅವರಿಗೆ ಇತರೇ ವರಮಾನ ಇದ್ದರೆ ಅಂದರೆ ಅದು ಹೆಚ್ ಆರ್ ಸಿ ಆಗಬಹುದು, ಇತರೇ ಅಲೋಯನ್ಸ್ ಆಗಿ ಇರಬಹುದು,

ಇವೆಲ್ಲಾ ಸೇರಿಸಿಕೊಂಡರೆ ಜಾಸ್ತಿಯಾಗುತ್ತದೆ. ಅದುದರಿಂದ ನಾವು ಒಟ್ಟು ಸ್ಕಾಲರಿ ಅಥವಾ ಒಟ್ಟು ವರಮಾನ ೨೦೦೦ ರೂಪಾಯಿನವರೆಗೆ ಇದ್ದರೆ ಈ ತೆರಿಗೆ ಕೊಡಬೇಕಾಗಿಲ್ಲ ಎಂದು ಮಾಡಿದ್ದೇವೆ. ಅವರಿಗೆ ಇತರೇ ಅಲೋಯೆನ್ಸ್‌ಗಳಿಲ್ಲಾ ಸೇರಿರುವುದರಿಂದ ೨ ಸಾವಿರ ರೂಪಾಯಿಗಳವರೆಗೆ ರಿಯಾಯಿತಿ ತೋರಿಸಿದ್ದೇವೆ. ನಾವು ಇದನ್ನು ಸರಿಪಡಿಸುವುದಕ್ಕೋಸ್ಕರವಾಗಿ ಈ ಡೆಫನಿಷನ್‌ನಲ್ಲಿ ಗ್ರಾಸ್ ಸ್ಕಾಲರಿ ಎನ್ನುವುದನ್ನು ಬದಲಾವಣೆ ಮಾಡಿದ್ದೇವೆ.

ಶ್ರೀ ಎಂ.ಎಸ್. ಕೃಷ್ಣನ್.—ತಾವು ಅದನ್ನು ಬದಲಾವಣೆ ಮಾಡಿಲ್ಲ. ಸತ್ಯಕ್ಕೆ ದೂರವಾದುದನ್ನು ಹೇಳಿತ್ತಿದ್ದೀರಿ. ಬದಲಾವಣೆ ಮಾಡಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಬದಲಾವಣೆ ಮಾಡದೇಹೋಗಿದ್ದರೆ ಅದನ್ನು ವಿಚಾರ ಮಾಡೋಣ. ನಮಗೆ ಬಂದಿರತಕ್ಕಂಥ ಮಾಹಿತಿ ಪ್ರಕಾರ ಇತರೇ ಅಲೋಯೆನ್ಸ್‌ಗಳು, ಭತ್ಯ ಇವುಗಳೆಲ್ಲಾ ಸೇರಿ ಹೆಚ್ಚಿಗೆ ಸಂಬಳ ಬರತಕ್ಕಂಥವರಿಂದ ತೆರಿಗೆ ಬರುವುದಕ್ಕೆ ಸಾಧ್ಯ, ಅದಕ್ಕಾಗಿ ನಾವು ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಮಾನ್ಯ ಕೃಷ್ಣನ್‌ರವರು ಹೇಳಿದ ಹಾಗೆ ಇದರಲ್ಲಿ ತೊಂದರೆ ಆಗುವ ಹಾಗೆ ಇದೆ ಎಂದು ಇದ್ದ ಪಕ್ಷದಲ್ಲಿ ಇದರ ಬಗ್ಗೆ ಮುಂದಿನ ವರ್ಷ ನೋಡೋಣ. ಆದರೆ ಇದರಲ್ಲಿ ಮೂಲವಾದ ಮುಖ್ಯ ಉದ್ದೇಶ ಏನು ಎಂದರೆ ಎರಡು ಸಾವಿರಕ್ಕಿಂತಲೂ ಯಾರಿಗೆ ಹೆಚ್ಚು ಸಂಬಳ ಮತ್ತು ಇತರೇ ಭತ್ಯಗಳು ಬರುತ್ತದೆಯೋ ಅಂಥವರು ವರ್ಷಕ್ಕೆ ೨೪೦ ರೂಪಾಯಿಗಳ ವೃತ್ತಿ ತೆರಿಗೆ ಕೊಡಬೇಕಾಗುತ್ತದೆ. ಅಂದರೆ ಅವರಿಗೆ ತಿಂಗಳಿಗೆ ೨೦ ರೂಪಾಯಿ ಬಿದ್ದ ಹಾಗಾಗುತ್ತದೆ. ಈಗ ನಾನು ವಕೀಲ, ನನಗೆ ಸಂಬಳ ಬರಲಿ, ಬಾರದೇ ಇರಲಿ ನನಗೆ ವರಮಾನ ಇರಲಿ ಇಲ್ಲದೇ ಇರಲಿ ನಾನು ಒಂದು ವರ್ಷಕ್ಕೆ ೨೫೦ ರೂಪಾಯಿ ಕಟ್ಟಲೇ ಬೇಕು. ಆದಕ್ಕೋಸ್ಕರವಾಗಿ ಈ ತಿದ್ದುಪಡಿಯಲ್ಲಿ ಟ್ಯಾಕ್ಸ್ ಆನ್ ಪ್ರೊಫೆಷನ್ಸ್, ಟ್ರೇಡ್ಸ್, ಕಾಲಿಂಗ್ ಅಂಡ್ ಎಂಪ್ಲಾಯ್‌ಮೆಂಟ್ ಎಂದು ಹಾಕಿರುವುದು. ಇದು ಸಂವಿಧಾನದ ೨೭ನೇ ಪ್ರಕಾರ ಇದೆ. ಕೇಂದ್ರ ಸರ್ಕಾರದ ನಗರ ಭವೃದ್ಧಿ ಮಂತ್ರಿಗಳು ಒಂದು ಸಮ್ಮೇಳನ ಕರೆದಿದ್ದರು. ಅಲ್ಲಿ ಎಲ್ಲಾ ಮೇಯರ್‌ಗಳೂ ಬಂದಿದ್ದರು. ಅಲ್ಲಿ ಮೇಯರ್‌ಗಳು ಮತ್ತು ಇನ್ನೂ ಹಲವಾರು ಮಂತ್ರಿಗಳು ಹೇಳಿದರು ಏನೆಂದರೆ ಈ ಆರ್ಟಿಕಲ್ ಅನ್ನು ಬದಲಾವಣೆ ಮಾಡಿ ಈ ಪ್ರೊಫೆಷನಲ್ ಟ್ಯಾಕ್ಸ್ ೨೫೦ರಿಂದ ೧೫೦೦ ರೂಪಾಯಿನವರೆಗೂ ಜಾಸ್ತಿ ಮಾಡಬೇಕು ಎಂದು. ಇದಕ್ಕೆ ಕಾರಣ ಏನೆಂದರೆ ನಗರ ಪ್ರದೇಶದಲ್ಲಿರತಕ್ಕಂಥವರು ಹಳ್ಳಿ ಗಾಡಿನಲ್ಲಿರುವವರಿಗಿಂತಲೂ ಹೆಚ್ಚು ವರಮಾನ ಪಡೆಯುತ್ತಾರೆ, ಆದರಿಂದ ಇದನ್ನು ಜಾಸ್ತಿ ಮಾಡಬೇಕು ಎಂದು ಹೇಳಿದರು. ಇದರ ಬಗ್ಗೆ ಮಾನ್ಯ ವೆಂಕಟರಾಮಯ್ಯನವರಿಗೆ ಮತ್ತು ಮಾನ್ಯ ಕೃಷ್ಣನ್ ಅವರಿಗೆ ನಾನು ಹೇಳುವುದಿಷ್ಟೆ, ಈ ಒಂದು ತೆರಿಗೆಯಿಂದ ನಮಗೆ ಹೆಚ್ಚಿನ ಸಂಪಾದನೆ ಏನೂ ಆಗುತ್ತಿಲ್ಲ. ಆದ್ದರಿಂದ ವಿನಾಯಿತಿ ಕೊಡುವ ಪ್ರಶ್ನೆಯೇ ಬರುವುದಿಲ್ಲ. ಪಟ್ಟಣಗಳಲ್ಲಿ ಮತ್ತು ಹಳ್ಳಿಗಾಡಿನ ಪ್ರದೇಶಗಳಲ್ಲಿ ಹೆಚ್ಚಿನ ವರಮಾನ ಪಡೆಯುವವರು ಯಾರಿದ್ದಾರೆ, ಅವರುಗಳು ಅಲ್ಪ ಕಾಣಿಕೆಯನ್ನು ಈ ತೆರಿಗೆ ಮುಖಾಂತರ ಕೊಡುವುದು ಸೂಕ್ತ ಎಂದು ನನ್ನ ಅಭಿಪ್ರಾಯ. ತಿಂಗಳಿಗೆ ಎರಡು ಸಾವಿರ ರೂಪಾಯಿಗಳಿಗಿಂತ ಹೆಚ್ಚು ವರಮಾನ ಬರುವವರು ತಿಂಗಳಿಗೆ ಇಪ್ಪತ್ತು ರೂಪಾಯಿಗಳ ಪ್ರಕಾರ ಈ ತೆರಿಗೆಯನ್ನು ಕೊಡಲು ಯಾವ ಕಷ್ಟವೂ ಆಗುವುದಿಲ್ಲ. ಮಾನ್ಯ ವೆಂಕಟರಾಮಯ್ಯನವರು ನನ್ನ ಬಗ್ಗೆ ಪರ್ಸನಲ್ ಆಗಿ ಮಾತನಾಡಿ ನಿಷ್ಠುಗಾರರೆ ಹೆಂಡತಿ ಮಕ್ಕಳು ಇಲ್ಲ, ಆದರೆ ಮದುವೆಯಾಗಿ ಐದಾರು ಮಕ್ಕಳು ಇರುವವರಿಗೆ ಈ ತೆರಿಗೆ ಕೊಡುವುದಕ್ಕೆ ಕಷ್ಟ ವಾಗುತ್ತದೆಂದು ಹೇಳಿದರು. ಇದರ ಬಗ್ಗೆ ಇಲ್ಲಿ ಬೇಕಾದರೆ ವಾದಕ್ಕೆ ವಾದವನ್ನು ಏನ್ನುಷ್ಟಾದರೂ ಮಾಡಬಹುದು. ಆದರೆ ನಾನು ಅವರು ಹೇಳಿದಂತೆ ಹೇಳುವುದಕ್ಕೆ ಹೋಗುವುದಿಲ್ಲ. ಈ ತೆರಿಗೆ ಕೊಡಲು ಅವರಿಗೆ ಕಷ್ಟವಾಗಿದ್ದರೆ ನನ್ನ ಹಾಗೆ ಏತಕ್ಕೆ ಇರಬಾರದು ?

(ಸಭೆಯ ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನೀವು ಈ ಮಾತನ್ನು ಅವರಿಗೆ ಈಗ ಹೇಳಿದರೆ ಹೇಗಾಗುತ್ತದೆ ?

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿ ಕೆಲವರು ಗಾಂಧಿ ಹೆಸರು ಹೇಳುತ್ತಾರೆ. ಆದರೆ ಅವರ ತರಹ ಇರುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಇಂತಹವರು ನನ್ನ ಬಗ್ಗೆ ಹೇಳುತ್ತಾರೆ. ನಾನು ಮಾತ್ರ ನನಗೆ ಇಷ್ಟ ಬಂದ ಹಾಗೆ ನಡೆದುಕೊಳ್ಳುತ್ತೇನೆಯೇ ಹೊರತು ಗಾಂಧಿ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.--ಮಹಾತ್ಮಗಾಂಧೀಜಿ ಅವರು ಫ್ಯಾಮಿಲಿಪ್ಲಾನಿಂಗ್ ಮಾಡ ಬೇಕೆಂದು ಹೇಳಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.--ಗಾಂಧೀಜಿ ಅವರು ನಾನು ಮಾಡಿದ ತಪ್ಪುಗಳನ್ನು ನೀವು ಮಾಡ ಬೇಡಿ ಎಂದು ಜನರಿಗೆ ಹೇಳಿದರು. ಅವರಿಗೆ ಮಕ್ಕಳಾದ ಮೇಲೆ ಈ ಮಾತನ್ನು ಹೇಳಿದರು. ಇಲ್ಲಿ ಕೆಲವರು ಮಹಾತ್ಮಗಾಂಧಿ ಅವರು ಇದ್ದಂತೆ ಇರುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಆದರೆ ಅವರ ಹೆಸರನ್ನು ಮಾತ್ರ ಹೇಳುತ್ತಿರುತ್ತಾರೆ. ಇಂತಹ ದ್ವಂದ್ವ ನೀತಿಯನ್ನು ಅನುಸರಿಸುವುದು ಸರಿಯಲ್ಲ. ಇಲ್ಲಿ ನಮ್ಮ ಪಾಡಿಗೆ ನಾವು ಇರಬೇಕೇ ಹೊರತು ಬೇರೆಯವರ ಸ್ವಂತ ವಿಚಾರವನ್ನು ಪ್ರಸ್ತಾಪ ಮಾಡುವುದು ಸರಿಯಲ್ಲ. ಇದು ಸರ್ಕಾರದ ಕೆಲಸ. ಇದು ತೆರಿಗೆಗೆ ಸಂಬಂಧಪಟ್ಟ ವಿಚಾರ ಸರ್ಕಾರಕ್ಕೆ ಈ ತೆರಿಗೆಯಿಂದ ಪರಮಾನ ಬರುವುದು ಬೇಕೇ ಅಥವಾ ಬೇಡವೇ ಎಂಬುದು ಇಲ್ಲಿರುವ ಪ್ರಶ್ನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.--ನೀವು ಗಾಂಧಿ ತರಹ ಇರದಿದ್ದರೂ ಸಹ ಅವರು ಕನಸಿ ಕಂಡಂತೆ ಇರುವವರು ನೀವು.

ಶ್ರೀ ಎ. ಲಕ್ಷ್ಮೀಸಾಗರ್.--ರಾಜಕೀಯದಲ್ಲಿ ಕೆಲವರು ತಮ್ಮ ಒಂದು ಅನುಕೂಲಕ್ಕಾಗಿ ಗಾಂಧೀಜಿ ಅವರ ಹೆಸರನ್ನು ಹೇಳುವವರು ಇದ್ದಾರೆ. ಆದರೆ ನಾನು ಮಾತ್ರ ಯಾವಾಗಲೂ ಗಾಂಧಿ ನನ್ನ ಗುರು ಎಂದು ಹೇಳಿಲ್ಲ. ನಾನು ವಿನಾಚಾರಿ. ನನ್ನ ಧ್ಯೇಯ ನಾನು ಇಟ್ಟುಕೊಂಡಿದ್ದೇನೆ. ನಾನು ಹೀಗಿದ್ದರೇ ಈ ದೇಶಕ್ಕೆ ಮತ್ತು ಈ ನಮ್ಮ ಸಮಾಜಕ್ಕೆ ಚೆನ್ನ ಎಂಬ ನಿರ್ಧಾರಕ್ಕೆ ಬಂದಿದ್ದೇನೆ. ನಾನು ಹೀಗಿರುವುದರಿಂದ ಬೇರೆಯವರಿಗೂ ತೊಂದರೆ ಇಲ್ಲ. ಈ ನಮ್ಮ ಸಮಾಜದಲ್ಲಿ ಸಂಸಾರಸ್ಥರಿಗೆ ಬಹಳ ಪಾಯರ್ಾದೆ. ಸಂಸಾರಸ್ಥರಾದವರು ತಮಗೆ ಬಹಳ ಮಕ್ಕಳುಮರಿ ಇವೆ ಎಂದು ಹೇಳಿ ಕೊಳ್ಳುತ್ತಾರೆ. ಆದೇ ನನ್ನಂಥವರು ಎಷ್ಟೇ ನ್ಯಾಯವಾಗಿದ್ದರೂ ಸಹ ಕೆಲವೊಮ್ಮೆ ಬಡ್ಡಿಮಗ ಮೊಸಾಲೆದೋಸೆ ತಿನ್ನುತ್ತಿದ್ದಾನೆ, ಏನೋ ಮಾಡಿಕೊಂಡಿರಬೇಕು ಎಂದು ಕೆಲವರು ಮಾತನಾಡಿ ಕೊಳ್ಳುವುದು ಉಂಟು. ನನ್ನಪಾಡಿಗೆ ನಾನು ಇರುವುದಕ್ಕೂ ಸಹ ಈ ಜನ ಬಿಡುವುದಿಲ್ಲ. ಏನು ಮಾಡುವುದು ? ಇದು ನಮ್ಮ ಜಯಮಾನ. ಇದರ ಬಗ್ಗೆ ನಾನು ಇನ್ನು ಹೆಚ್ಚು ಹೇಳುವುದಿಲ್ಲ. ಈ ತಿದ್ದುಪಡಿ ಮಸೂದೆಗೆ ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.--ಮಾನ್ಯ ಲಕ್ಷ್ಮೀಸಾಗರ್ ಅವರ ಬಗ್ಗೆ ಇಲ್ಲಿ ಬಹಳ ಜನ ಮಾನ್ಯ ಸದಸ್ಯರು ವ್ಯಾಖ್ಯಾನ ಮಾಡಿದರೂ ಸಹ ಅವರು ಒಂದು ಇಂಚ್ ಕೂಡ ಬಗ್ಗುತ್ತಿಲ್ಲ. ಅವರು ಈ ಮೊದಲು ವಿರೋಧಪಕ್ಷದ ಕಡೆ ಕುಳಿತಿದ್ದಾಗಲೂ ಸಹ ನಾನು ಅವರನ್ನು ನೋಡಿದ್ದೇನೆ. ಆಗಿನಿಂದಲೂ ತಾವು ಒಂದೇರೀತಿ ಇದ್ದೀರಿ. ಇದರಲ್ಲಿ ಏನೋ ರಹಸ್ಯ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.---ನಾನು ಊಸರವಳ್ಳಿ ಅಲ್ಲ.

SRI BLASIUS D'SOUZA.—For the last 3 years you have not paid compensation to the Corporation and Municipalities from the Profession Tax, which you have to pay.

SRI A. LAKSHMISAGAR.—Profession tax should be regarded not forming part of compensation payable in lieu of abolition of Octroi. That should be considered separately and there has been 10% increase over what has been paid last year. For the year 1987-88 the total amount of compensation payable is of the order of Rs. 47 crores.

SRI. BLASIUS D'SOUZA. — Mr. Speaker Sir, the Hon. Minister has not understood me. The Profession Tax was collected earlier in 1975 by the Corporations and Municipalities.

SRI A. LAKSHMISAGAR,— This is an old argument. But, for the time being it has not been taken into consideration.

ಅಧ್ಯಕ್ಷರು— ಈಗ ಪ್ರಸ್ತಾವ ಏನೆಂದರೆ :

೧೯೭೭ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಬುಗಳು ಮತ್ತು ಉದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲಾಯಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು ಖಂಡ-೨ ಇದಕ್ಕೆ ಮಾನ್ಯ ಕೃಷ್ಣನ್‌ರವರು ತಿದ್ದುಪಡಿಯನ್ನು ಕೊಟ್ಟಿದ್ದಾರೆ. ಕೃಷ್ಣನ್‌ರವರು ತಿದ್ದುಪಡಿಯನ್ನು ಮಂಡಿಸಬೇಕು.

SRI M. S. KRISHNAN.— Mr. Speaker Sir, I beg to move the following amendment to Clause 2 ;

> "In Clause 2 after the word 'person' and before the word 'whether' the words on regular basis' shall be inserted."

For sub-clause i of Clause 2, the following clause shall be inserted ;

> "Provided that the salary or wage earner drawing a basic wage of less than Rs. 1,200/- per month shall not be liable to tax on Professions, Trades, Callings and Employments with effect from 1st April, 1983."

ಅಧ್ಯಕ್ಷರು.— ತಿದ್ದುಪಡಿಯನ್ನು ಮಂಡಿಸಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್,— ಮಾನ್ಯ ಲಕ್ಷ್ಮೀಸಾಗರ್‌ರವರು ಇದನ್ನು ಗಮನಕ್ಕೆ ತೆಗೆದು ಕೊಂಡಿದ್ದಾರೆ. ಆದರೂ ಸಹ ಮತ್ತೊಮ್ಮೆ ಅವರ ಗಮನಕ್ಕೆ ತರುವುದೇನೆಂದರೆ, ಒರಿಜಿನಲ್ ಆಕ್ಟ್‌ಗೂ ಈಗ ತಿದ್ದುಪಡಿ ಬಂದಿರುವುದಕ್ಕೂ ವ್ಯತ್ಯಾಸವಿದೆ ಎಂದು ತೋರಿಸುತ್ತಾ ಇದ್ದೇನೆ. ಒರಿಜಿನಲ್ ಆಕ್ಟ್‌ನಲ್ಲಿ ಈ ರೀತಿಇದೆ.

> "Salary" or 'Wage' includes pay or wages, Dearness Allowance and all other remunerations received by any person on regular basis whether payable in cash or kind, and also includes requisites, and profits in lieu of salary, as defined in Section 17 of the Income Tax Act 1961."

ಒರಿಜಿನಲ್ ಆಕ್ಟ್‌ನಲ್ಲಿ ಸೈದ್ಧಾಂತಿಕವಾಗಿ ಯೋಚನೆ ಮಾಡಿ ರೆಗ್ಯುಲರ್ ಬೇಸಿಸ್ ಎನ್ನುವ ಪದವನ್ನು ಉಪಯೋಗಿಸಿರುವುದು. ಯಾವುದೇ ಇನ್‌ಕಂ ಇರಲಿ ಬಹಳ ವೇಗವಾಗಿ ಇರಕೂಡದು. ಶಾಸನದಲ್ಲಿ ಇರಬೇಕಾದರೆ ಸ್ಪಷ್ಟತೆ ಇರಬೇಕು ಎಂದು ಅದನ್ನು ಹಾಕಿದರು, ಅದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಆದಾದ ನಂತರ ೧೯೮೫ರಲ್ಲಿ ಇದನ್ನು ಬದಲಾವಣೆ ಮಾಡಿದ್ದಾರೆ. ಸೆಕ್ಷನ್‌ಗೆ ಬಿಗೆ ಸರ್ಕಾರ ಅಮೆಂಡ್ ತಂದಿದೆ. ಆ ಅಮೆಂಡ್‌ಮೆಂಟ್ ಏನೆಂದರೆ,

> "For Clause (j) the following shall be deemed to have been substituted from the 1st April, 'Salary' or 'Wage' means 'Basic Salary' or Wage received by any person on regular basis whether in cash or kind, but does not include

any other allowance or remuneration or any perquisites or profits."

ಅಂದರೆ ಇದರೊಳಗೆ Basic Wage ಎಂದು ಹೇಳಿದರು. ಅವರೊಳಗೆ Other remuneration ಎಂದು ಹೇಳಿದರು. ಎರಡನೆಯದು ರೆಗ್ಯುಲರ್ ಬೇಸಿಸ್ ಎಂದು ಒರಿಜಿನಲ್ ಆಕ್ಟ್‌ನಲ್ಲಿದೆ. ಅದನ್ನು ಬದಲಾವಣೆ ಮಾಡಿ, ರೆಗ್ಯುಲರ್ ಬೇಸಿಸ್ ಎನ್ನುವುದನ್ನು ಹೊಡೆದು ಹಾಕಿ ಅವರ ರೆಮ್ಯುನರೇಷನ್ ಎಂದು ಸೇರಿಸಿದರು. ಇದನ್ನು ೧೯೫೫ರ ಸೆಪ್ಟೆಂಬರ್‌ನಲ್ಲಿ ಮಾಡಿದರು. ಆ ದಿನ ಈ ಪ್ರಶ್ನೆ ಬಂತು. ವೇಜ್ ಆರ್ನರ್ಸ್, ಕಾರ್ಮಿಕರು, ಮಧ್ಯಮ ವರ್ಗದ ನೌಕರರು ಯಾರಿದ್ದಾರೆ ಅವರಂ, ಭಾರಿ ದೊಡ್ಡದಾಗಿ ಟ್ಯಾಕ್ಸ್ ಹಾಕುತ್ತಿದ್ದೀರಿ, ಅದು ಸರಿಯಾದುದಲ್ಲ, ಅದನ್ನು ಕಡಿಮೆ ಮಾಡಬೇಕು, ಬೇಸಿಕ್‌ವೇಜ್ ಆಧಾರದ ಮೇಲೆ ಮಾಡಿ ಎಂದು ಹೇಳಿದರು, ಕ್ಯಾಜುವಲ್ ಅಲೋಯನ್ಸ್ ಎಲ್ಲವ ಸೇರಿಕೊಳ್ಳುತ್ತದೆ, ಇದು ಸ್ಪೆಸಿಫಿಕ್ಯಾಗಿ ಇರಬೇಕಾಗುತ್ತದೆ, ಆ ದೃಷ್ಟಿಯಿಂದ ಅವರು ಕೇಳಿದರು, ಅದಕ್ಕೆ ಮಾನ್ಯತೆ ಕೊಟ್ಟು ಅಮೆಂಡ್‌ಮೆಂಟ್ ತಂದದ್ದು ಇನ್ನೊಂದು ಅಮೆಂಡ್‌ಮೆಂಟ್ ಏನೆಂದರೆ, It not only goes back to this clause, but goes back beyond the original clause also. ಇದು ಒರಿಜಿನಲ್ ಆಕ್ಟ್‌ಗೆ ವಿರುದ್ಧವಾಗಿ ಹೋಗುತ್ತಿದೆ. ರೆಗ್ಯುಲರ್ ಬೇಸಿಸ್ ಎನ್ನುವುದನ್ನು ಒಮಿಟ್ ಮಾಡಿದ್ದಾರೆ. ಇದನ್ನು ಒಮಿಟ್ ಮಾಡುವುದಕ್ಕೆ ಕಾರಣ ಏನು ಎನ್ನುವುದನ್ನು ಉತ್ತರ ಕೊಡುವಾಗಲೂ ಹೇಳಲಿಲ್ಲ. ಮಾನ್ಯ ಲಕ್ಷ್ಮೀಸಾಗರ್ ಅವರ ವಿಷಯ ನನಗೆ ಗೊತ್ತಿದೆ.

ಅಧ್ಯಕ್ಷರು— ಉತ್ತರ ಹೇಳುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.— ರೆಗ್ಯುಲರ್ ಬೇಸಿಸ್ ಎಂದು ಇದ್ದರೆ ಸ್ಪಷ್ಟವಾಗಿರುತ್ತಿತ್ತು. ನಾನು ಈ ಒಂದು ತಿದ್ದುಪಡಿಯನ್ನು ಬರೆಯುವಾಗ ದುರಾದೃಷ್ಟವಶಾತ್ ಅಮೆಂಡ್‌ಮೆಂಟ್‌ಗಳು ತಮ್ಮಲ್ಲಿ ಸಿಗಲಿಲ್ಲ. ನಾನು ತಮಗೊಂದು ಚೀಟಿ ಕಳುಹಿಸಿದ್ದೆ, ನಾನು ಅಲ್ಲಿ ಹೋಗಿ ವಿಚಾರ ಮಾಡಲಾಗಿ, ಈ ವಿಷಯವನ್ನು ಔಟರಲ್ಲಿ ಚರ್ಚೆ ಮಾಡಿದಾಗ ನೀವೇ ತೆಗೆದುಕೊಂಡು ಹೋಗಿದ್ದೀರಂದು ಹೇಳಿದರು. ನಾನು ಮೂಲ ಕಾಯಿದೆಗೆ ಅನುಗುಣವಾಗಿ ತಿದ್ದುಪಡಿ ತಂದಿದ್ದೇನೆ. ರೆಗ್ಯುಲರ್ ಬೇಸಿಸ್ ಎನ್ನುವುದನ್ನು ಸೇರಿಸಬೇಕೆಂದು ಹೇಳಿದ್ದೇನೆ. ನಾನು ತಂದಿರುವ ತಿದ್ದುಪಡಿ ಪ್ರಕಾರ ೧೨೦೦ ರೂಪಾಯಿಗಳಿಗಿಂತ ಕಡಿಮೆ ಬೇಸಿಕ್ ಇರುವವರನ್ನು ಈ ಟ್ಯಾಕ್ಸ್‌ನಿಂದ ವಿನಾಯಿತಿ ಕೊಡ ಬೇಕೆಂದು ಇದೆ. ಅಲ್ಲದೆ ಇವತ್ತು ಬ್ಯಾಂಕ್ ಮತ್ತು ಎಲ್.ಐ.ಸಿ. ನೌಕರರಿಗೆ ಬೇಸಿಕ್ ಮೇಗಿಂತ ಬೇರೆ ಬೇರೆ ವೇತನಗಳು ಜಾಸ್ತಿ ಬರುತ್ತವೆ. ಹಿಂದೆ ಏನಿತ್ತು ಅದನ್ನು ಬಿಟ್ಟು ಮಾಡುವುದು ನ್ಯಾಯವಾದುದಲ್ಲ. ಇವತ್ತು ೨-೩ ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳಬಹುದು, ರೂಪಾಯಿ ವ್ಯಾಲ್ಯೂ ೧೪ ಪೈಸೆ ಇದೆಯೆಂದು ಲೋಕಸಭೆಯಲ್ಲಿ ವಿತ್ತ ಮಂತ್ರಿಗಳು ಹೇಳಿದ್ದಾರೆ. ಎರಡು ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಂಡರೂ ಅಕ್ಚುಯಲ್ ಅಮೌಂಟ್ ಕಡಿಮೆಯಾಗುತ್ತದೆ. ನಿನ್ನೆ ಮಾನ್ಯ ಬಸವಲಿಂಗಪ್ಪನವರು ಈ ಮನೆಯ ಶಾಸಕರುಗಳಿಗೆ ಸಂಬಳ ಮತ್ತು ಭತ್ಯವನ್ನು ಜಾಸ್ತಿ ಮಾಡಬೇಕೆಂದು ಯಾರನ್ನೂ ಕೇಳದೆ ಹೇಳಿದರು. ಅಧಿಕಾರಿಗಳಿಗೆ ೩-೪ ಸಾವಿರ ರೂಪಾಯಿಗಳು ಇರುವಾಗ, ನಮಗೂ ಜಾಸ್ತಿ ಮಾಡಬೇಕೆಂದು ಹೇಳಿದ್ದಾರೆ. ಕಡಿಮೆ ಸಂಬಳದವರು ತೆರಿಗೆ ಕೊಡಬೇಕೆನ್ನುವುದು ಅರ್ಥವಿಲ್ಲದ ಶಂಪ್ಯ ವಾದವಾಗುತ್ತದೆ. ಇದರಿಂದ ಗ್ರಾಮಾಂತರ ಪ್ರದೇಶಗಳಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದ್ದೀರಿ. ಇದು ಬರೀ ಪೊಳ್ಳು ಮಾತು. ಗ್ರಾಮಾಂತರ ಪ್ರದೇಶಕ್ಕೆ ಈ ಹಣವನ್ನು ವಿನಿಯೋಗಿಸುತ್ತೇವೆಂದು ತಾವು ಹೇಳುತ್ತೀರಾ? ಮಾನ್ಯ ಸದಸ್ಯರಾದ ಬ್ಲೇಸಿಯಸ್ ಡಿಸೋಜಾರವರು ಈ ಹಣವನ್ನು ಅಭಿವೃದ್ಧಿ ಕೆಲಸಗಳಿಗೆ ವಿನಿಯೋಗಿಸಬೇಕೆಂದು ಹೇಳಿದರು ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೀರಾ? ಇಲ್ಲ. ಅದರ ಬಗ್ಗೆ ಆಮೇಲೆ ಚರ್ಚೆ ಮಾಡೋಣ ಎಂದು ಹೇಳಿದರು. ಕಾರ್ಮಿಕರು ರೈತರು ವಿರೋಧಿಗಳಂ ಎಂದು ವಿತಂಡವಾದಗಳನ್ನು ಇಟ್ಟಿದ್ದಾರೆ, ಅಂಥ ಕೆಟ್ಟ ಮನೋಭಾವ ಕಾರ್ಮಿಕರಿಗೆ ಇಲ್ಲ. ಇವೊತ್ತು ಸಾವಿರಾರು ಜನ ಕಾರ್ಮಿಕರು ರೈತರ ಮಕ್ಕಳೇ ಇದ್ದಾರೆ. ಮಾನ್ಯ ಮುಖಂಡರುಗಳ, ಸದಸ್ಯರುಗಳ ಸಂಬಂಧೀಕರು ಇದ್ದಾರೆ. ಜಮೀನು ಇಟ್ಟುಕೊಂಡಿರುವಂಥ ಕಾರ್ಮಿಕರು ಇದ್ದಾರೆ. ಒಬ್ಬರ ಮೇಲೆ ಇನ್ನೊಬ್ಬರನ್ನು ಎತ್ತಿಕಟ್ಟುವತಕ್ಕಂಥಾದ್ದು ತಪ್ಪು ಎಂದಂ ಹೇಳುತ್ತೇನೆ. ನಾನು ಮಾನ್ಯ ಮಂತ್ರಿಯವರ ಮನಸ್ಸನ್ನು

ಒಲಿಸತಕ್ಕ ಪ್ರಯತ್ನ ಮಾಡಿದ್ದೇನೆ. ಅವರ ಮನಸ್ಸು ಒಲಿದಿದೆಯೋ ಇಲ್ಲವೋ ಗೊತ್ತಿಲ್ಲ. ತಾವು ನಾನು ತಂದಿರುವ ತಿದ್ದುಪಡಿಯನ್ನು ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ತಾವು ಒಪ್ಪಿಕೊಳ್ಳುತ್ತೀರೋ, ಬಿಡುತ್ತೀರೋ ?

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ. ಅದನ್ನು ಮತ್ತೆ ಪುನರುಚ್ಚಾರ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಮಾನ್ಯ ಕೃಷ್ಣನ್‌ರವರು ಸಾಗರ್‌ರವರನ್ನು ಹೇಗೆ ಬದಲಾವಣೆ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದರೋ, ಅದೇ ರೀತಿ ಸನ್ಮಾನ್ಯ ಕೃಷ್ಣನ್‌ರವರ ಮಾನಸಿಕ ಪ್ರವೃತ್ತಿಯನ್ನು ಬದಲಾವಣೆ ಮಾಡಲಿಕ್ಕೆ ನಾನು ಪ್ರಯತ್ನ ಮಾಡುವುದಿಲ್ಲ. ಅವರು ಅಲ್ಲಿಯೇ ಇರಲಿ ನಾನು ಇಲ್ಲಿಯೇ ಇರುತ್ತೇನೆ. ರೆಗ್ಯುಲರ್ ಬೇಸಿಸ್ ಮೇಲೆ ಅಂದರೆ ಸ್ಯಾಲರೀಡ್ ಮ್ಯಾನ್ ಅಂದರೆ ಯಾವ ಅರ್ಥ ಎಂದರೆ ೧೨೦ ದಿವಸಗಳಾದರೂ ಕೆಲಸ ಮಾಡಿದರೆ ಅಂತಹವರನ್ನು ರೆಗ್ಯುಲರ್ ಬೇಸಿಸ್ ಎಂದು ಕರೆಯುತ್ತೇವೆ. ಅವರು ಮಾತ್ರ ಈ ತೆರಿಗೆಯನ್ನು ಕೊಡಬೇಕಾಗುತ್ತದೆ. ಆದ್ದರಿಂದ ಅವರ ತಿದ್ದುಪಡಿಯನ್ನು ವಿರೋಧ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಈಗ ತಿದ್ದು ಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ,

"In clause-2, after the word 'person' and before the word whether the words on regular basis shall be inserted. For sub-clause-1 of clause-2. the following clause shall be inserted. Provided that the salary or wage earners showing a basic wage of less than Rs. 1200/- per month shall not be take to tax on Professions, trades callings and Employment with effect from 1st April 1983."

SRI N. S. KRISHNAN.—I press for the division.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಅಧ್ಯಕ್ಷರೇ, ಈ ಒಂದು ಇಷ್ಯೂ ಮೇಲೆ ಆ ಕಡೆಯ ಸದಸ್ಯರು ಅನೇಕ ಜನ ನಮಗೆ ಸಪೋರ್ಟ್ ಮಾಡುವವರು ಇದ್ದಾರೆ. ಆದ್ದರಿಂದ ತಾವು ಓಟಿಗೆ ಹಾಕಬೇಕು.

ಅಧ್ಯಕ್ಷರು.—ಕಂಡು, ಕಂಡು ಏತಕ್ಕೆ ಈ ರೀತಿ ಹೇಳುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಅಧ್ಯಕ್ಷರೇ, ಇದು ಏನು ಅನ್ಯಾಯ ಎಂದು ಆ ಕಡೆಯ ಸದಸ್ಯರು ಅನಂತರ ಬಂದು ನಮ್ಮ ಕಡೆ ಹೇಳುತ್ತಾರೆ, ಆದ್ದರಿಂದ ಇದನ್ನು ಮತಕ್ಕೆ ಹಾಕಬೇಕು.

(ಸ್ವಲ್ಪ ಕಾಲ ಸದನದಲ್ಲಿ ಕರೆಗಂಟೆಯನ್ನು ಹಾಕಲಾಯಿತು)

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ, ಮೊದಲು ಕೋರಂ ಇರಲಿಲ್ಲ, ಈಗ ಎಲ್ಲಾ ಸದಸ್ಯರು ಬರುತ್ತಿದ್ದಾರೆ.

ಅಧ್ಯಕ್ಷರು.—ಆ ದೃಷ್ಟಿಯಿಂದ ಒಳ್ಳೆಯದು ಮಾಡಿದಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಎಂ. ಎಸ್. ನಾರಾಯಣರಾವ್ ಅವರು ಬಂದರು. ಅವರು ನಮ್ಮ ಕಡೆ ಇದ್ದಾರೆ.

ಶ್ರೀ ಬಾಬುರೆಡ್ಡಿ ವಿ. ತಾಂಗಳ್.—ಅಧ್ಯಕ್ಷರೇ, ಕೃಷ್ಣನ್‌ರವರು ಬೆಂಗಳೂರಿನವರು ಅವರು ಮನೆಯಿಂದ ಊಟ ಮಾಡಿಕೊಂಡು ಬರುತ್ತಾರೆ. ನಾವು ಊಟಕ್ಕೆ ಹೊರಗಡೆ ಹೋಗಬೇಕಾಗುತ್ತದೆ.

ಅಧ್ಯಕ್ಷರು.—ಈಗ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಸಭೆಯನ್ನು ವಿಭಜಿಸಲಾಯಿತು

ತಿದ್ದುಪಡಿ ಪರವಾಗಿರುವವರು.—

ಹೌದು — ೧೯

ವಿರೋಧವಾಗಿರುವವರು ಇಲ್ಲ — ೪೪

ಅಧ್ಯಕ್ಷರು.—ಪ್ರಸ್ತಾವವು ತಿರಸ್ಕರಿಸಲ್ಪಟ್ಟಿತು

ಖಂಡ—೨

ಅಧ್ಯಕ್ಷರು.—"ಖಂಡ ೨ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ—೩

ಅಧ್ಯಕ್ಷರು.—ಈಗ ಖಂಡ ೩ಕ್ಕೆ ಮಾನ್ಯ ಎಂ. ಎಸ್. ಕೃಷ್ಣನ್‌ರವರಿಂದ ತಿದ್ದುಪಡಿ ಸೂಚನೆ ಇದೆ. ಅದನ್ನು ಅವರು ಪಂಡಿಸುವುದು.

SRI M. S. KRISHNAN.—I beg to move :

That in Clause 3, for the words and figures "is Rs. 2000/- or more", the words and figures 'is more than basic pay of Rs. 1500/- plus all other allowance' shall be substituted.

ಅಧ್ಯಕ್ಷರು.—ಈಗ ಪ್ರಸ್ತಾಪವನ್ನು ಮಂಡಿಸಲಾಯಿತು.

ಶ್ರೀ ಎಂ. ಎಸ್ ಕೃಷ್ಣನ್.—ನಾನು ಈಗಾಗಲೇ ಇದರ ಬಗ್ಗೆ ಮಾತನಾಡಿರುವುದರಿಂದ ಮತ್ತೆ ಇದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

That in Clause 3, for the words and figures "is Rs. 2000/ or more", the words and figures 'is more than basis pay of 1500/- plus all other allowance' shall be substituted.

ಪ್ರಸ್ತಾವವು ತಿರಸ್ಕರಿಸಲ್ಪಟ್ಟಿತು

ಖಂಡ—೩

ಅಧ್ಯಕ್ಷರು.—"ಖಂಡ—೩ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ—೩ನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ— ೧ ಇತ್ಯಾದಿ :—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, "ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರಿ. ಎ. ಲಕ್ಷ್ಮೀಸಾಗರ್.— "೧೯೮೭ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಬುಗಳು ಮತ್ತು ಉದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ"

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.—

"೧೯೮೭ನೇ ಇಸವಿಯ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಕಸಬುಗಳು ಮತ್ತು ಉದ್ಯೋಗಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

೧೯೮೭ನೇ ಇಸವಿಯ ಸ್ಥಳೀಯ ಪ್ರದೇಶಗಳಿಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ಎರಡನೆಯ ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ. ಎ. ಲಕ್ಷ್ಮೀಸಾಗರ್.— ೧೯೮೭ನೇ ಇಸವಿಯ ಸ್ಥಳೀಯ ಪ್ರದೇಶಗಳಿಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ ಎರಡನೆಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ. ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೇ ೧೯೮೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳೊಳಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ವಿಧಿಸುವ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಹೇಳುತ್ತಾ, ಮಾನ್ಯ ಅಧ್ಯಕ್ಷರೇ ಈಗಾಗಲೇ ಇದರ ಬಗ್ಗೆ ಚರ್ಚೆಯಾಗಿದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ಪ್ರವೇಶ ತೆರಿಗೆ ಶೇಕಡಾ ೨ ರಿಂದ ಶೇಕಡಾ ೫ಕ್ಕೆ ಹೆಚ್ಚಿಸತಕ್ಕಂಥ ವಿಚಾರ ಪ್ರಸ್ತಾಪವಾಗಿದೆ. ಇದರ ಬಗ್ಗೆ ವ್ಯಾಪಾರಸ್ಥರಲ್ಲಿ ಇರತಕ್ಕಂಥ ತಪ್ಪು ಕಲ್ಪನೆಯ ಬಗ್ಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಮೂಲಭೂತವಾಗಿ ಇಟ್ಟಿರತಕ್ಕಂಥ ವಿಚಾರ ಮಾನ್ಯ ರಾಷ್ಟ್ರಪತಿಯವರ ಒಪ್ಪಿಗೆಗೂ ಹೋಗಬೇಕು ಎನ್ನುವ ವಿಚಾರವನ್ನು ತಮ್ಮಲ್ಲಿ ಹೇಳ್ವುದಕ್ಕೆ ಇಚ್ಛಿಸುತ್ತೇನೆ. ಹಾಗೂ ಮಾನ್ಯ ಸದಸ್ಯರು ಇದಕ್ಕೆ ಬೆಂಬಲ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಮಂಡಿಸಿರತಕ್ಕಂಥ ಈ ಒಂದು ವಿಧೇಯಕದ ಬಗ್ಗೆ ಹೇಳತಕ್ಕಂಥದ್ದು ಇಷ್ಟೇ. ಹಿಂದೆ ಆಕ್ಟ್ರಾಯ್ ಎನ್ನತಕ್ಕಂಥ ಒಂದು ತೆರಿಗೆ ಇದ್ದು, ಇದು ಹಳೆಯಕಾಲದ ಪದ್ಧತಿಯಾಗಿತ್ತು. ಇದನ್ನು ತೆಗೆಯಬೇಕು ಎನ್ನುವ ದೃಷ್ಟಿಯಿಂದ ೧೯೭೯ರಲ್ಲಿ ಎಂದರೆ ಎಂಟ್ರಿ ಟ್ಯಾಕ್ಸ್ ಆಕ್ಟ್ ಪಾಸಾಗಿ ಆಕ್ಟ್ರಾಯ್ ಪದ್ಧತಿಯನ್ನು ಹೊಗಲಾಡಿಸುವ ವಿಚಾರ ಬಂತು. ಮತ್ತೆ ಈ ರೀತಿಯಾಗಿ ವಸೂಲಾದ ಆಕ್ಟ್ರಾಯಿ ಬಹಳ ದೊಡ್ಡ ಪ್ರಮಾಣದಲ್ಲಿ ಸೋರಿ ಹೋಗಲಿಕ್ಕೆ ಏನು ಕಾರಣ ಎನ್ನುವ ಬಗ್ಗೆ ದೊಡ್ಡ ಚರಿತ್ರೆಯಾಗಿ ಮಾರ್ಪಾಡಾಯಿತು. ಇದು ನಾನು ನಮ್ಮ ರಾಜ್ಯಕ್ಕೆ ಸೀಮಿತಗೊಳಿಸಿ ಮಾತನಾಡುವುದಲ್ಲ ಇದರ ಬಗ್ಗೆ ಚರ್ಚೆ ಮಾಡಬೇಕಾದರೆ ನಮ್ಮ ದೇಶದಲ್ಲಿ ಯಾವಯಾವ ರಾಜ್ಯದಲ್ಲಿ ಈ ಆಕ್ಟ್ರಾಯ್ ತೆರಿಗೆಯನ್ನು ಜನತೆ ವಿರೋಧ ಮಾಡಿದರು, ಯಾವ ಯಾವ ಸರ್ಕಾರಗಳು ತೆಗೆದುಹಾಕಿದರು ಎನ್ನುವ ವಿಚಾರವೂ ಕೂಡ ಬಂದಿತು.